ಕರ್ನಾಟಕ ವಿಧಾನ ಸಭೆ

(1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 492

(2) ಮಾನ್ಯ ಸದಸ್ಯರ ಹೆಸರು : ಶ್ರೀ ಅವಿನಾಶ್ ಉಮೇಶ್ ಜಾಧವ್ ಡಾ॥ (ಚಿಂಚೋಳಿ)

(3) ಉತ್ತರಿಸಬೇಕಾದ ದಿನಾಂಕ : 02.02.2021

(4) ಉತ್ತರಿಸುವ ಸಚಿವರು : ಮಾನ್ಯ ಗೃಹ ಮತ್ತು ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

	ಪ್ರಶ್ನೆ	ಉತ್ತರ
(ಅ)	ಕಲಬುರಗಿ ಜಿಲ್ಲೆಯ ಕಾಳಗಿ ನೂತನ ತಾಲ್ಲೂಕು ವ್ಯಾಪ್ತಿಯ ಸಾರ್ವಜನಿಕರು ನ್ಯಾಯಾಲಯ ಪ್ರಕರಣಗಳಿಗೆ ದೂರದ ಕಲಬುರಗಿ ನಗರಕ್ಕೆ ಹೋಗಬೇಕಾಗಿರುವುದರಿಂದ ಅಲ್ಲಿನ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಹೌದು
(ಆ)	ಹಾಗಿದ್ದಲ್ಲಿ ಕಾಳಗಿ ಹೊಸ ತಾಲ್ಲೂಕಿನಲ್ಲಿ ಮಾನ್ಯ ಕಿರಿಯ ಶ್ರೇಣಿ ಸಿವಿಲ್ ಮತ್ತು ಕ್ರಿಮಿನಲ್ ನ್ಯಾಯಾಲಯ ಪ್ರಾರಂಭಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು)	ದಿನಾಂಕ: 06.09.2017 ರ ಸರ್ಕಾರಿ ಆದೇಶ ಸಂಖ್ಯೆ: ಆರ್‌ಡಿ 35 ಭುದಾಪು 2017 ರನ್ವಯ ಕಲಬುರಗಿ ಜಿಲ್ಲೆಯಲ್ಲಿ ಹೊಸದಾಗಿ ರಚಿಸಲಾದ ಕಾಳಗಿ, ಕಮಲಾಪುರ, ಯಡ್ರಾಮಿ, ಶಹಾಬಾದ್ ತಾಲ್ಲೂಕುಗಳಲ್ಲಿ, ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ ನ್ಯಾಯಾಲಯಗಳನ್ನು ಸ್ಥಾಪಿಸುವ ಕುರಿತ ಪ್ರಸ್ತಾವನೆಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದ ಗೌರವ ಸಮಿತಿಯ ಮುಂದೆ ಮಂಡಿಸಲಾಗಿದ್ದು, ದಿನಾಂಕ:12.12.2019 ರಂದು ನಡೆದ ಗೌರವಾನ್ವಿತ ಸಮಿತಿ ಸಭೆಯಲ್ಲಿ ಈ ತಾಲ್ಲೂಕುಗಳು ಪೂರ್ಣ ಪ್ರಮಾಣದಲ್ಲಿ ಸ್ಥಾಪನೆಯಾದ ನಂತರ ಸದರಿ ವಿಷಯವನ್ನು ಪರಿಗಣಿಸಲಾಗುವುದು ಎಂದು ನಿರ್ಣಯಿಸಲಾಗಿರುತ್ತದೆ. ಮುಂದುವರಿದು, ಕರ್ನಾಟಕ ರಾಜ್ಯದಲ್ಲಿ ರಚಿಸಲಾದ 39 ಹೊಸ ತಾಲ್ಲೂಕುಗಳಲ್ಲಿ ಪೂರ್ಣ ಪ್ರಮಾಣದ ತಾಲೂಕು ಮಟ್ಟದ ಕಚೇರಿಗಳನ್ನು ಸ್ಥಾಪಿಸಲು ಕೈಗೊಂಡ ಕ್ರಮಗಳಿಗೆ ಸಂಬಂಧಿಸಿದಂತೆ ಕಂದಾಯ ಇಲಾಖೆಯ ಪತ್ರ ದಿನಾಂಕ: 10.11.2020 ರಲ್ಲಿ, "ರಾಜ್ಯದಲ್ಲಿ ಹೊಸದಾಗಿ ರಚನೆಯಾಗಿದ್ದ 50 ನೂತನ ತಾಲ್ಲೂಕುಗಳಲ್ಲಿ ತಾಲ್ಲೂಕು ಮಟ್ಟದ ಪ್ರಮುಖ ಇಲಾಖೆಗಳ ಕಚೇರಿಗಳನ್ನು ಪ್ರಾರಂಭಿಸಲು ಆಯಾ ಇಲಾಖಾ ವತಿಯಿಂದ ಕ್ರಮ

		ಕೈಗೊಳ್ಳಲು ನಿರ್ದೇಶನ ನೀಡಲಾಗಿತ್ತು. ಆದರೆ ರಾಜ್ಯದಲ್ಲಿ ಕೋವಿಡ್ -19 ಇರುವ ಸಂದರ್ಭ ಹಾಗೂ ಸದ್ಯದ ಆರ್ಥಿಕ ಪರಿಸ್ಥಿತಿಯ ಹಿನ್ನಲೆಯಲ್ಲಿ ಹೊಸ ತಾಲ್ಲೂಕುಗಳಲ್ಲಿ ತಹಸೀಲ್ದಾರ್ ಕಚೇರಿಯನ್ನು ಹೊರತುಪಡಿಸಿ ಇನ್ನಿತರ ತಾಲ್ಲೂಕು ಮಟ್ಟದ ಕಚೇರಿ ಪ್ರಾರಂಭಿಸಲು / ಹುದ್ದೆಗಳನ್ನು ಸೃಜಿಸುವ ಪ್ರಸ್ತಾವನೆಯನ್ನು ಮುಂದೂಡಲು ಆರ್ಥಿಕ ಇಲಾಖೆಯು ಅಭಿಪ್ರಾಯ ನೀಡಿರುತ್ತದೆ. ಹೀಗಾಗಿ ಸದ್ಯದ ಪರಿಸ್ಥಿತಿಯ ಹಿನ್ನಲೆಯಲ್ಲಿ ಹೊಸ ತಾಲ್ಲೂಕುಗಳಲ್ಲಿ ಪೂರ್ಣ ಪ್ರಮಾಣದ ತಾಲ್ಲೂಕು ಮಟ್ಟದ ಕಚೇರಿಗಳನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲವೆಂದು" ತಿಳಿಸಿರುತ್ತಾರೆ. ಹೊಸ ತಾಲ್ಲೂಕುಗಳಲ್ಲಿ ಪೂರ್ಣ ಪ್ರಮಾಣದ ತಾಲ್ಲೂಕು ಮಟ್ಟದ ಕಚೇರಿಗಳು ಪ್ರಾರಂಭಗೊಂಡ ನಂತರ ಈ ತಾಲೂಕುಗಳಲ್ಲಿ ನ್ಯಾಯಾಲಯ ಸ್ಥಾಪನೆಯ ವಿಷಯವನ್ನು ಪರಿಗಣಿಸಲಾಗುವುದು

(ಸಂಖ್ಯೆ: ಲಾ-ಎಲ್‌ಎಎಂ/29/2021)

(ಬಸವರಾಜ ಬೊಮ್ಮಾಯಿ)
ಒಳಾಡಳಿತ ಮತ್ತು ಕಾನೂನು,ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ
ಸಚಿವರು,
ಕರ್ನಾಟಕ ಸರ್ಕಾರ.

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	393
ಸದಸ್ಯರ ಹೆಸರು	:	ಶ್ರೀ ರಂಗನಾಥ್ ಹೆಚ್.ಡಿ. ಡಾ॥ (ಕುಣಿಗಲ್)
ಉತ್ತರಿಸಬೇಕಾದ ದಿನಾಂಕ	:	02.02.2021
ಉತ್ತರಿಸಬೇಕಾದ ಸಚಿವರು	:	ಮಾನ್ಯ ಮುಖ್ಯಮಂತ್ರಿಯವರು

****

	ಪ್ರಶ್ನೆ	ಉತ್ತರ
ಅ)	ಕುಣಿಗಲ್ ತಾಲ್ಲೂಕಿನ ಹಲವು ಗ್ರಾಮೀಣ ಪ್ರದೇಶಗಳಲ್ಲಿ ನಿರಂತರ ವಿದ್ಯುತ್ ಸಂಪರ್ಕವಿಲ್ಲದೆ ಅಲ್ಲಿನ ಜನರು ತುಂಬಾ ತೊಂದರೆ ಅನುಭವಿಸುತ್ತಿದ್ದು, ಈ ಪ್ರದೇಶಗಳಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಯಾವ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ;	ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ, ಕುಣಿಗಲ್ ತಾಲ್ಲೂಕು ವ್ಯಾಪ್ತಿಯ ಎಲ್ಲಾ ಗ್ರಾಮಗಳಿಗೆ ಹಂತ-1 ಮತ್ತು ಹಂತ-3 ರಲ್ಲಿ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲಾಗಿರುತ್ತದೆ. ಹಂತ-1 ರಲ್ಲಿ 16 ಫೀಡರಗಳ ಕಾಮಗಾರಿಯನ್ನು ಹಾಗೂ ಹಂತ-3 ರಲ್ಲಿ 21 ಫೀಡರಗಳ ಕಾಮಗಾರಿಯನ್ನು ಪೂರ್ಣಗೊಳಿಸಿ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ. ನಿರಂತರ ಜ್ಯೋತಿ ಯೋಜನೆಯಡಿಯಲ್ಲಿ ಈಗಾಗಲೇ ವಿದ್ಯುತ್ ಸಂಪರ್ಕ ಕಲ್ಪಿಸಿರುವ ಗ್ರಾಮಗಳಲ್ಲಿ ಇತ್ತೀಚಿಗೆ ಅಭಿವೃದ್ಧಿ ಹೊಂದಿರುವ ಪ್ರದೇಶಗಳಿಗೆ (ರಸ್ತೆಯ ಬದಿಯಲ್ಲಿರುವ ಮನೆಗಳಿಗೆ) ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ಅಂದಾಜು ಪಟ್ಟಿಯನ್ನು ತಯಾರಿಸಿದ್ದು, ಪರಿಶೀಲನಾ ಹಂತದಲ್ಲಿರುತ್ತದೆ.
ಆ)	ಪರಿಶಿಷ್ಟ ಜಾತಿ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದ ಬಹಳಷ್ಟು ಜನರು ನಿರಂತರ ವಿದ್ಯುತ್ ಸೌಲಭ್ಯದಿಂದ ವಂಚಿತರಾಗಿದ್ದು, ಈ ವರ್ಗದ ಜನರಿಗೆ ನಿರಂತರ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?	ನಿರಂತರ ಜ್ಯೋತಿ ಯೋಜನೆಯು ಗ್ರಾಮೀಣ ಪ್ರದೇಶದಲ್ಲಿ ಪ್ರತ್ಯೇಕ 11 ಕೆವಿ ವಿದ್ಯುತ್ ಮಾರ್ಗಗಳನ್ನು ನಿರ್ಮಿಸಿ ಕೃಷಿ ಮತ್ತು ಕೃಷಿಯೇತರ ವಿದ್ಯುತ್ ಸ್ಥಾವರಗಳನ್ನು ಬೇರ್ಪಡಿಸುವ ಯೋಜನೆಯಾಗಿದ್ದು, ಈ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿರುವ ಎಲ್ಲಾ ವರ್ಗದ ಜನರ ಕೃಷಿಯೇತರ ಸ್ಥಾವರಗಳಾದ ಗೃಹ ಬಳಕೆ, ವಾಣಿಜ್ಯ / ಕೈಗಾರಿಕೆ, ಕುಡಿಯುವ ನೀರಿನ ಯೋಜನೆ, ಬೀದಿ ದೀಪ ಇತ್ಯಾದಿಗಳಿಗೆ 24 ಗಂಟೆಗಳ 3 ಫೇಸ್ ನಿರಂತರ ವಿದ್ಯುತ್ ಸರಬರಾಜು ಕಲ್ಪಿಸಲಾಗುತ್ತಿದೆ. ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ವ್ಯಾಪ್ತಿಯ ಕುಣಿಗಲ್ ತಾಲ್ಲೂಕಿನಲ್ಲಿ ಈಗಾಗಲೇ ನಿರಂತರ ಜ್ಯೋತಿ ಯೋಜನೆ ಅನುಷ್ಠಾನಗೊಂಡಿರುವ ಮಾರ್ಗಗಳ ಗ್ರಾಮೀಣ ಪ್ರದೇಶಗಳಲ್ಲಿ ಪ್ರಸ್ತುತ ವಿದ್ಯುತ್ ಸರಬರಾಜನ್ನು ದಿನಕ್ಕೆ ಸುಮಾರು 22 ರಿಂದ 23 ಗಂಟೆಗಳ ಕಾಲಾವಧಿಯವರೆಗೆ ನೀಡಲಾಗುತ್ತಿದೆ.

ಸಂಖ್ಯೆ: ಎನರ್ಜಿ 2 ಪಿಪಿಎಂ 2021

(ಬಿ.ಎಸ್.ಯಡಿಯೂರಪ್ಪ)
ಮುಖ್ಯಮಂತ್ರಿ

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	729
ಉತ್ತರಿಸಬೇಕಾದ ದಿನಾಂಕ	:	02.02.2021
ಸದಸ್ಯರ ಹೆಸರು		ಶ್ರೀ ನಿರಂಜನ್ ಕುಮಾರ್ ಸಿ.ಎಸ್. (ಗುಂಡ್ಲುಪೇಟೆ)
ಉತ್ತರಿಸುವ ಸಚಿವರು	:	ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು ಸಾಂಖ್ಯಿಕ ಇಲಾಖೆ ಸಚಿವರು.

<table>
<tr><th>ಕ್ರ. ಸಂ</th><th>ಪ್ರಶ್ನೆ</th><th>ಉತ್ತರ</th><th>Answer</th></tr>
<tr>
<td>ಅ)</td>
<td>ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರಕ್ಕೆ ಯುವ ಸಬಲೀಕರಣ ಹಾಗೂ ಕ್ರೀಡಾ ಇಲಾಖೆಯ ವತಿಯಿಂದ ಕಳೆದ 2 ವರ್ಷಗಳಲ್ಲಿ ಎಷ್ಟು ಅನುದಾನ ಮಂಜೂರು ಮಾಡಲಾಗಿದೆ; ಸದರಿ ಅನುದಾನದಲ್ಲಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; (ಕಾಮಗಾರಿವಾರು ಹಾಗೂ ಅನುದಾನವಾರ ವಿವರ ನೀಡುವುದು)</td>
<td>ಚಾಮರಾಜನಗರ ಜಿಲ್ಲೆಯ ಗುಂಡ್ಲುಪೇಟೆಗೆ ಕಳೆದ ಎರಡು ವರ್ಷಗಳಲ್ಲಿ ಬಿಡುಗಡೆ ಮಾಡಿದ ಅನುದಾನದ ವಿವರ ಈ ಕೆಳಕಂಡಂತಿದೆ:-
<table>
<tr><th colspan="2">ಜಿಲ್ಲಾ ಪಂಚಾಯತ್ ವತಿಯಿಂದ</th></tr>
<tr><th>ವರ್ಷ</th><th>ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ)</th></tr>
<tr><td>2018-19</td><td>11.00
(ವೇತನ ಮತ್ತು ನಿರ್ವಹಣೆ)</td></tr>
<tr><td>2019-20</td><td>19.00
(ವೇತನ, ನಿರ್ವಹಣೆ ಮತ್ತು, ಕಾಮಗಾರಿ)</td></tr>
</table>
ಗುಂಡ್ಲುಪೇಟೆಯ ಡಿ. ದೇವರಾಜ ಅರಸು ತಾಲ್ಲೂಕು ಕ್ರೀಡಾಂಗಣದಲ್ಲಿ ಕೈಗೊಂಡ ಕಾಮಗಾರಿಗಳ ವಿವರಗಳು ಈ ಕೆಳಕಂಡಂತಿವೆ:-

2019-20ನೇ ಸಾಲಿನ ಜಿಲ್ಲಾ ಪಂಚಾಯತ್ ಅನುದಾನದಲ್ಲಿ ರೂ. 2.00 ಲಕ್ಷಗಳಲ್ಲಿ ಗುಂಡ್ಲುಪೇಟೆಯ ತಾಲ್ಲೂಕು ಕ್ರೀಡಾಂಗಣದ ಒಳಾಂಗಣ ಕ್ರೀಡಾಂಗಣದ ಮೇಲ್ಚಾವಣಿಯನ್ನು ದುರಸ್ಥಿಗೊಳಿಸಲಾಗಿರುತ್ತದೆ.
ಜಿಲ್ಲಾ ಪಂಚಾಯತ್ ಅನುದಾನ ರೂ. 5.00 ಲಕ್ಷದಲ್ಲಿ ಮಹಿಳೆಯರಿಗೆ ಮತ್ತು ಪುರುಷರಿಗೆ ಶೌಚಾಲಯದ ಕಾಮಗಾರಿಯನ್ನು ಕೈಗೊಳ್ಳಲಾಗಿದೆ.

</td>
<td>The details of grants released to Gundlupet, Chamarajanagar District during last two years are as follows:-
<table>
<tr><th colspan="2">From Zilla Panchayat sector</th></tr>
<tr><th>Year</th><th>Grant released (Rs. In Lakhs)</th></tr>
<tr><td>2018-19</td><td>11.00
(Pay and Maintenance)</td></tr>
<tr><td>2019-20</td><td>19.00
(Pay, Maintenance and works)</td></tr>
</table>
Works taken in D. Devaraj Urs taluk stadium, Gundlupet taluk are as follows:-

In the year 2019 – 20, roof of the Indoor Stadium of Gundlupet Taluk Stadium has been repaired by Rs 2.00 lakhs under the grants of Zilla Panchayath
Toilet block for men and women were constructed by Rs.5.00 lakhs under the grants of Zilla Panchayath.

</td>
</tr>
<tr>
<td>ಆ)</td>
<td>ಗುಂಡ್ಲುಪೇಟೆ ತಾಲ್ಲೂಕು ಕ್ರೀಡಾಂಗಣಕ್ಕೆ ಕಾಂಪೌಂಡ್ ನಿರ್ಮಾಣ ಮಾಡಲು ಅನುದಾನ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td>
<td>ಹೌದು</td>
<td>Yes</td>
</tr>
</table>

ಇ)	ಬಂದಿದ್ದಲ್ಲಿ ಯಾವಾಗ ಅನುದಾನ ಮಂಜೂರು ಮಾಡಿ, ಕಾಮಗಾರಿ ಪ್ರಾರಂಭಿಸಲಾಗುವುದು? (ಸಂಪೂರ್ಣ ವಿವರ ನೀಡುವುದು)	ಮಾನ್ಯ ಶಾಸಕರಿಂದ ಬಂದಿರುವ ಪ್ರಸ್ತಾವನೆಯನ್ವಯ ಅಂದಾಜು ಪಟ್ಟಿ ತಯಾರಿಸಿ, ಅನುದಾನದ ಲಭ್ಯತೆ ಅನುಸಾರ ಸೂಕ್ತ ಕ್ರಮವಹಿಸಲಾಗುವುದು.	Preparing Estimate as per proposal received from hon'ble MLA, suitable action will be taken according to the availability of grants.

ವೈಎಸ್ ಡಿ-/ಇಬಿಬಿ/3/2021

(ಡಾ|| ನಾರಾಯಣ ಗೌಡ)
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ
ಯೋಜನೆ ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖಾ ಸಚಿವರು.

ಕರ್ನಾಟಕ ವಿಧಾನ ಸಭೆ

1. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 473
2. ಮಾನ್ಯ ವಿಧಾನ ಸಭೆ ಸದಸ್ಯರ ಹೆಸರು : ಶ್ರೀಮತಿ ಸೌಮ್ಯ ರೆಡ್ಡಿ (ಜಯನಗರ)
3. ಉತ್ತರಿಸುವ ದಿನಾಂಕ : 02.02.2021
4. ಉತ್ತರಿಸುವ ಸಚಿವರು : ಗೃಹ ಸಚಿವರು

ಕ್ರ. ಸಂ.	ಪ್ರಶ್ನೆ	ಉತ್ತರ
ಅ	ಇತ್ತೀಚೆಗೆ ಡ್ರಗ್ಸ್ ಮತ್ತು ಹುಕ್ಕಾ ಬಾರ್ ಕೆಫೆಗಳಿಗೆ ಯುವಕರು ಹೆಚ್ಚಾಗಿ ಮಾರು ಹೋಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಬಂದಿರುತ್ತದೆ
ಆ	ಜಯನಗರ ವಿಧಾನಸಭಾ ಕ್ಷೇತ್ರದಲ್ಲಿ ಯುವಕರು ಹೆಚ್ಚಾಗಿ ಡ್ರಗ್ಸ್ ಚಟಕ್ಕೆ ತುತ್ತಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	ಜಯನಗರ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಗೆ ಒಳಪಡುವ ಪೊಲೀಸ್ ಠಾಣೆಗಳಲ್ಲಿ ಎನ್‌ಡಿಪಿಎಸ್ ಅಡಿಯಲ್ಲಿ ದಾಖಲಿಸಿರುವ ಪ್ರಕರಣಗಳ ಅಂಕಿ ಅಂಶಗಳ ವಿವರ ಈ ಕೆಳಕಂಡಂತಿದೆ. ಜಯನಗರ ವಿಧಾನಸಭಾ ಕ್ಷೇತ್ರ — 2020 ಸಿದ್ದಾಪುರ — 2 ಬಸವನಗುಡಿ — 0 ಜಯನಗರ — 16 ಜೆ.ಪಿ.ನಗರ — 27 ಬನಶಂಕರಿ — 0 ಸುದ್ದಗುಂಟೆಪಾಳ್ಯ — 20 ತಿಲಕನಗರ — 07
ಇ	ಇತರೆ ರಾಜ್ಯಗಳು ಡ್ರಗ್ಸ್ ಮತ್ತು ಹುಕ್ಕಾ ಬಾರ್ ಕೆಫೆಗಳನ್ನು ನಿಷೇಧಿಸಿರುವ ರೀತ್ಯಾ ರಾಜ್ಯದಲ್ಲಿ ಡ್ರಗ್ಸ್‌ಗಳನ್ನು ನಿಷೇಧಿಸುವ ಕುರಿತಂತೆ ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ (ವಿವರ ನೀಡುವುದು)?	ರಾಜ್ಯದಲ್ಲಿ ಡ್ರಗ್ಸ್‌ಗಳನ್ನು ನಿಷೇಧಿಸುವ ಕುರಿತಂತೆ ಕೈಗೊಂಡ ಕ್ರಮಗಳ ವಿವರ: ➢ ಮಾದಕ ವಸ್ತುಗಳ ಅಕ್ರಮ ಸಾಗಾಣಿಕೆ & ಮಾರಾಟ ತಡೆಗಟ್ಟಲು ಮತ್ತು ಮಾದಕ ವಸ್ತುಗಳ ದುಷ್ಪರಿಣಾಮ ಕುರಿತು ಹಲವು ಕಾರ್ಯಕ್ರಮಗಳನ್ನು ಆಯೋಜಿಸಿ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಡ್ರಗ್ಸ್ ನಿಯಂತ್ರಣಕ್ಕೆ ಸಾರ್ವಜನಿಕ ಸಹಭಾಗಿತ್ವ ಪಡೆಯಲು, ಮಾದಕ ವಸ್ತುಗಳ ಅವ್ಯವಹಾರಗಳಿಗೆ ಸಂಬಂಧಿಸಿದಂತೆ ಸಾರ್ವಜನಿಕರು

ರಹಸ್ಯ ಮಾಹಿತಿಯನ್ನು 1908 (ಟೋಲ್ ಫ್ರೀ) ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಕೋರಲಾಗಿರುತ್ತದೆ. ಇದರಿಂದ ಸಾರ್ವಜನಿಕರು ಮುಕ್ತವಾಗಿ ಡ್ರಗ್ಸ್ ಸರಬರಾಜು, ಮಾರಾಟ, ಬಳಕೆಗಳ ಕುರಿತು ಪೊಲೀಸರಿಗೆ ಹೆಚ್ಚು ಹೆಚ್ಚು ಮಾಹಿತಿಗಳನ್ನು ನೀಡುವುದಕ್ಕೆ ಅವಕಾಶವಾಗಿರುತ್ತದೆ.

- ಸಾಮಾಜಿಕ ಜಾಲತಾಣಗಳ ಮೂಲಕ ಈಗಾಗಲೇ ಸದರಿ ಮಾಹಿತಿಯನ್ನು ಪ್ರಚಾರ ಮಾಡಲಾಗಿರುತ್ತದೆ. ಈ ಸಂಬಂಧ ಜಾಹಿರಾತು ಫಲಕ, ಬ್ಯಾನರ್ಸ್ ಮತ್ತು ಸ್ಟಿಕ್ಕರ್‌ಗಳನ್ನು ಮುದ್ರಣ ಮಾಡಿಸಿ ಎಲ್ಲಾ ವಿಭಾಗೀಯ ಉಪ ಪೊಲೀಸ್ ಆಯುಕ್ತರುಗಳಿಗೆ, ಈ ಸಂಬಂಧ ಎಲ್ಲಾ ವಿಧ್ಯಾ ಸಂಸ್ಥೆಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಭಿತ್ತರಿಸಿ ಅರಿವು ಮೂಡಿಸುವ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಲಾಗಿದೆ.
- ಪೊಲೀಸ್ ಇಲಾಖೆಯಲ್ಲದೆ ಸಾರ್ವಜನಿಕ ಶಿಕ್ಷಣ ಇಲಾಖೆ, ಕುಟುಂಬ ಕಲ್ಯಾಣ ಇಲಾಖೆ, ತಾಂತ್ರಿಕ ಶಿಕ್ಷಣ ಇಲಾಖೆ ಹಾಗೂ ಇತರೆ ಇಲಾಖೆಗಳಿಗೂ ಸಹ ಜಾಹಿರಾತು ಫಲಕ, ಬ್ಯಾನರ್ಸ್ ಮತ್ತು ಸ್ಟಿಕ್ಕರ್‌ಗಳನ್ನು ನೀಡಿ ಈ ಸಂಬಂಧ ಅರಿವು ಮೂಡಿಸುವ ಬಗ್ಗೆ ಕ್ರಮಕೈಗೊಳ್ಳುವಂತೆ ಕೋರಲಾಗಿದೆ. ಹೀಗೆ ಮುದ್ರಿಸಲಾಗಿರುವ ಜಾಹಿರಾತು ಫಲಕ, ಬ್ಯಾನರ್ಸ್ ಮತ್ತು ಸ್ಟಿಕ್ಕರ್‌ಗಳನ್ನು ಪತ್ರಿಕಾ ಗೋಷ್ಠಿ ನಡೆಸಿ ಬಿಡುಗಡೆ ಮಾಡಲಾಗಿದೆ. ಈ ಸಂಬಂಧ ಮುದ್ರಿಸಲಾಗಿರುವ ಜಾಹಿರಾತು ಫಲಕ, ಬ್ಯಾನರ್ಸ್ ಮತ್ತು ಸ್ಟಿಕ್ಕರ್‌ಗಳನ್ನು ದಿನಪತ್ರಿಕೆಗಳಲ್ಲಿ ಹಾಗೂ ದೃಶ್ಯ ಮಾಧ್ಯಮಗಳ ಮೂಲಕ ಜಾಹಿರಾತು ನೀಡಲಾಗಿದೆ. ಮಾದಕ ವಸ್ತುಗಳ ಮಾರಾಟ ಜಾಲವನ್ನು ಪತ್ತೆ ಹಚ್ಚಿ ಅವರ ಮೊಬೈಲ್ ಸಿ.ಡಿ.ಆರ್. ಅನ್ನು ವಿಶ್ಲೇಷಿಸಿ ಮಾದಕ ವಸ್ತುಗಳ ಮಾರಾಟದ ಮೂಲದ ಬಗ್ಗೆ ಮಾಹಿತಿ ಸಂಗ್ರಹಿಸಿ ಕ್ರಮ ಜರುಗಿಸಲಾಗುತ್ತಿದೆ.
- ಶಾಲಾ ಕಾಲೇಜುಗಳು, ವಿದೇಶಿಯರು ವಾಸಿಸುತ್ತಿರುವ ಪ್ರದೇಶಗಳು, ಮತ್ತು ಕೊಳಚೆ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆ, ಮೆರವಣಿಗೆಗಳನ್ನು ನಡೆಸುವುದರ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲು ಹಾಗೂ ಸಾರ್ವಜನಿಕರಲ್ಲಿ ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಮಾದಕ ದ್ರವ್ಯದ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರಿಗೆ ಶಾಲಾ-ಕಾಲೇಜುಗಳಲ್ಲಿ ಡ್ರಗ್ ಅವೇರ್‌ನೆಸ್ ಪ್ರೋಗ್ರಾಮ್‌ಅನ್ನು ನಡೆಸಿ, ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಮುಖ ವೃತ್ತ ಬಸ್ ನಿಲ್ದಾಣ ಮುಂತಾದ ಸ್ಥಳಗಳಲ್ಲಿ ಈ ಬಗ್ಗೆ ಜಾಗೃತಿ ಮೂಡಿಸುವ ಭಿತ್ತಿ ಪತ್ರಗಳನ್ನು ಅಂಟಿಸುವ ಕಾರ್ಯವನ್ನು ಮಾಡಲಾಗಿರುತ್ತದೆ.
- ವಿದೇಶಿಯರು ವಿಶೇಷವಾಗಿ ನೈಜೀರಿಯನ್ಸ್ ಪ್ರಜೆಗಳು ಮಾದಕ ವಸ್ತುಗಳ ಮಾರಾಟ/ಸೇವನೆಯ ಪ್ರಕರಣಗಳಲ್ಲಿ ಆರೋಪಿಗಳಿಗೆ ಯಾವ ಮೂಲಗಳಿಂದ ಮಾದಕ ವಸ್ತುಗಳ ಸರಬರಾಜಾಗುತ್ತಿರುವ ಬಗ್ಗೆ ಸಂಪೂರ್ಣ ಮಾಹಿತಿ ಸಂಗ್ರಹಿಸಲು ಸೂಚಿಸಲಾಗಿದ್ದು, ಇಂತಹ ಕೃತ್ಯಗಳಲ್ಲಿ

ತೊಡಗಿರುವ ವಿದೇಶಿಯರನ್ನು ದಸ್ತಗಿರಿ ಮಾಡಿ ಅವರುಗಳ ಪಾಸ್‌ಪೋರ್ಟ್‌ಗಳನ್ನು ಮುಟ್ಟುಗೋಲು ಹಾಕಿಕೊಂಡು ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ. ವಿದೇಶಿಯರು ವಾಸದ ಬಗ್ಗೆ ಮಾಹಿತಿಯನ್ನು ಸಂಬಂಧಪಟ್ಟ ಪೊಲೀಸ್ ಠಾಣೆಗಳಿಗೆ ಒದಗಿಸುವಂತೆ ಈಗಾಗಲೇ ಸುತ್ತೋಲೆಗಳನ್ನು ಹೊರಡಿಸಲಾಗಿದೆ. ವಿಶೇಷ ಕಾರ್ಯಾಚರಣೆಗಳನ್ನು ನಡೆಸಿ ಇಂತಹ ಕೃತ್ಯವೆಸಗುವಂತಹವರ ವಿರುದ್ಧ ಕಠಿಣ ಕಾನೂನಿನ ಕ್ರಮ ಕೈಗೊಳ್ಳಲಾಗುತ್ತಿದೆ.

- ನಿಯಮ ಉಲ್ಲಂಘನೆ ಮಾಡುವ ಹುಕ್ಕಾ ಬಾರ್‌ಗಳು ಕಂಡು ಬಂದಲ್ಲಿ ಅಗತ್ಯ ಕಾನೂನು ರೀತಿಯ ಕ್ರಮ ಕೈಗೊಳ್ಳಲಾಗುವುದು ಹಾಗೂ ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ವಿದ್ಯಾರ್ಥಿಗಳು, ಯುವಜನತೆ ಹಾಗೂ ನಾಗರೀಕರಲ್ಲಿ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ. ಠಾಣಾ ಮಟ್ಟದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ರವರುಗಳ ಅಧ್ಯಕ್ಷತೆಯಲ್ಲಿ ಮಾದಕ ದ್ರವ್ಯ ವಿರೋಧಿ ನಾಗರೀಕ ಸಮಿತಿಯನ್ನು ರಚಿಸಲಾಗಿರುತ್ತದೆ. ಸದರಿ ಸಮಿತಿಯು ಠಾಣಾ ವ್ಯಾಪ್ತಿಯಲ್ಲಿನ ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ವಿದ್ಯಾರ್ಥಿಗಳಿಗೆ ಮಾದಕ ವಸ್ತುಗಳ ಸೇವನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ.
- ಠಾಣಾ ಸರಹದ್ದುಗಳಲ್ಲಿ ಮಾದಕ ದ್ರವ್ಯಗಳ ಅಕ್ರಮ ಸಾಗಾಣಿಕ ಮಾದಕ ದ್ರವ್ಯ ಜಾಲ ಕುರಿತು ಸ್ಥಳೀಯ ಬಾತ್ಮೀದಾರರು ಅಪರಾಧ ವಿಭಾಗದ ಸಿಬ್ಬಂದಿಗಳು ಹಾಗೂ ಬೀಟ್ ಸಿಬ್ಬಂದಿಗಳಿಂದ ಮಾಹಿತಿಯನ್ನು ಕಲೆ ಹಾಕಲಾಗುತ್ತಿದೆ. ಪ್ರತಿ ಘಟಕಗಳಲ್ಲಿ ಅಪರಾಧ ಪೊಲೀಸ್ ಠಾಣೆ (ಸಿ.ಇ.ಎನ್. ಪೊಲೀಸ್ ಠಾಣೆ) ತೆರೆಯಲಾಗಿದ್ದು, ಸದರಿ ಪೊಲೀಸ್ ಠಾಣೆಗಳು ಮಾದಕ ದ್ರವ್ಯಗಳ ಅಕ್ರಮ ಸಾಗಾಣಿಕೆ ಬಗ್ಗೆ ವಿಶೇಷವಾಗಿ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ.
- ಮಾದಕ ವಸ್ತುಗಳನ್ನು ಬೆಳೆಯುವ ಮತ್ತು ತಯಾರಿಸುವ ಲ್ಯಾಬ್‌ಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಹಾಗೂ ಸಾರ್ವಜನಿಕರಿಗೆ ಮತ್ತು ಶಾಲಾ ಕಾಲೇಜುಗಳ ಮಕ್ಕಳಿಗೆ ಸಭೆಗಳನ್ನು ಏರ್ಪಡಿಸಿ ಮಾದಕ ವಸ್ತುಗಳಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಸೂಚಿಸಿ, ಮಾದಕ ವಸ್ತುಗಳನ್ನು ತಯಾರು ಮಾಡುವ ವ್ಯಕ್ತಿಗಳ ವಿರುದ್ಧ ಕಾನೂನು ರೀತಿ ಕ್ರಮ ಕೈಗೊಳ್ಳುವಂತೆ ಸಹ ಸೂಚನೆಗಳನ್ನು ನೀಡಿರುತ್ತದೆ.
- **ಡಾರ್ಕ್ ವೆಬ್ ಆನ್‌ಲೈನ್ ಮೂಲಕ** ಸರಬರಾಜು ಆಗುತ್ತಿರುವ ಮಾದಕವಸ್ತುಗಳ ಬಗ್ಗೆ ಸೂಕ್ತ ನಿಗಾ ಇಡಲಾಗಿದ್ದು ಹಾಗೂ ಪ್ರಥಮ ಬಾರಿಗೆ ಆರೋಪಿಗಳ ವಿರುದ್ಧ **The Prevention of Illicit Traffic in Narcotic Drugs and Psychotropic substances (PITNDPS) Act-1988** ಅಡಿಯಲ್ಲಿ ಕ್ರಮ ಜರುಗಿಸಲಾಗಿರುತ್ತದೆ ಹಾಗೂ

ಮಾದಕ ವಸ್ತುಗಳ ವ್ಯಸನಿಗಳನ್ನು ಗುರುತಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಮುಖಾಂತರ ಡಿ–ಅಡಿಕ್ಷನ್ ಸೆಂಟರ್‌ಗಳಿಗೆ ಸೇರಿಸಲು ಕ್ರಮ ವಹಿಸಲಾಗುತ್ತಿದೆ.

- ಠಾಣಾ ಸರಹದ್ದುಗಳಲ್ಲಿ ಬರುವ ಶಾಲಾ ಕಾಲೇಜು ವಿಧ್ಯಾರ್ಥಿಗಳು ಮಾದಕ ವಸ್ತುಗಳ ಹಾಗೂ ಮಾದಕ ವ್ಯಸನಗಳಿಂದ ದೂರವಿರಲು ಮಾದಕ ದ್ರವ್ಯಗಳ ಸರಬರಾಜು, ಮಾರಾಟ, ಸೇವನೆಗೆ ಸಂಬಂಧಿಸಿದಂತೆ, ಆರೋಪಿಗಳಿಗೆ ಸರಬರಾಜು ಮಾಡುವ ವ್ಯಕ್ತಿಗಳನ್ನು ಗುರ್ತಿಸಿ ದಸ್ತಗಿರಿ ಮಾಡಿ ಕಾನೂನು ರೀತ್ಯಾ ಕ್ರಮ ಕೈಗೊಳ್ಳಲಾಗುತ್ತಿದೆ.
- ವಿದ್ಯಾರ್ಥಿಗಳು ಮತ್ತು ಯುವ ಸಮೂಹವು ಮಾದಕ ವಸ್ತುಗಳ ದುಶ್ಚಟಕ್ಕೆ ಬಲಿಯಾಗದಂತೆ ಶಾಲಾ ಕಾಲೇಜುಗಳ ಬಳಿ ಗಸ್ತು ವಾಹನಗಳಿಂದ ವಿಶೇಷವಾಗಿ ಗಸ್ತು ನಡೆಸಿ ಸ್ಥಳೀಯ ಪೊಲೀಸ್ ಅಧಿಕಾರಿ/ಸಿಬ್ಬಂದಿಗಳು ಆಯಾ ಶಾಖೆಗಳಿಗೆ ಹೋಗಿ ಮಾದಕ ವಸ್ತುಗಳ ದುಷ್ಪರಿಣಾಮದ ಬಗ್ಗೆ ಅರಿವು ಮೂಡಿಸಲಾಗುತ್ತಿದೆ ಮತ್ತು ಶಾಲಾ ಕಾಲೇಜುಗಳಲ್ಲಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು, ಎನ್.ಡಿ.ಪಿ.ಎಸ್ ಕಾಯ್ದೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಹಾಗೂ ಮಾದಕ ವಸ್ತು ಸಾಗಣೆ ಹಾಗೂ ಮಾರಾಟ ಮಾಡುವವರ ವಿರುದ್ಧ ನಿಗಾ ವಹಿಸಲಾಗುತ್ತಿದೆ.
- ಮಾದಕ ದ್ರವ್ಯಗಳ ಮಾರಾಟ ತಡೆಗಟ್ಟುವ ಬಗ್ಗೆ ಠಾಣಾ ಮಟ್ಟದಲ್ಲಿ ಗೌಪ್ಯ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ. ಶಾಲಾ ಕಾಲೇಜುಗಳಿಗೆ ಭೇಟಿ ನೀಡಿ ಅಕ್ಕ ಪಕ್ಕವಿರುವ ಅಂಗಡಿ ಮುಂಗಟ್ಟುಗಳಲ್ಲಿ ಮಾದಕ ದ್ರವ್ಯ ಮಾರಾಟವಾಗುತ್ತಿರುವ ಬಗ್ಗೆ ಗುಪ್ತವಾಗಿ ಮಾಹಿತಿಯನ್ನು ಕಲೆಹಾಕಿ ಕ್ರಮ ಕೈಗೊಳ್ಳಲಾಗುತ್ತಿದೆ.
- ಸಾಮಾಜಿಕ ಜಾಲತಾಣಗಳಲ್ಲಿ ಚುಟುಕ ವಿಡಿಯೋಗಳ ಮೂಲಕ ಮಾದಕ ವಸ್ತುಗಳ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.
- ಈ ಹಿಂದೆ ಡ್ರಗ್ಸ್ ಅಪರಾಧಗಳಲ್ಲಿ ಭಾಗಿಯಾಗಿರುವ ರೂಢೀಕೃತ ಆಸಾಮಿಗಳ ಚಟುವಟಿಕೆಗಳ ಮೇಲೆ ತೀವ್ರ ನಿಗಾವಣೆಯಲ್ಲಿಡಲಾಗಿದೆ. ಜೊತೆಗೆ ಅಂತರ್‌ರಾಜ್ಯ ಡ್ರಗ್ಸ್ ಆರೋಪಿಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ ಅವರ ಮೇಲೆ ನಿಗಾ ಇಡಲಾಗಿದೆ.
- ಬೆಂಗಳೂರು ನಗರ ಪೊಲೀಸರು ಪ್ರಥಮ ಬಾರಿಗೆ ಅಂತರ್ಜಾಲ (**Dark Web**) ಮುಖಾಂತರ ವಿದೇಶಗಳಿಂದ ಹಲವು ಮಾದರಿಯ ಡ್ರಗ್ಸ್‌ಗಳನ್ನು ಕೊರಿಯರ್ / ರಿಜಿಸ್ಟರ್ಡ್ ಅಂಚೆ ಮುಖಾಂತರ ನಗರಕ್ಕೆ ತರಿಸುತ್ತಿದ್ದ ಡ್ರಗ್ಸ್‌ಜಾಲವನ್ನು ಪತ್ತೆ ಮಾಡಿ, ಅಪಾರ ಪ್ರಮಾಣದ ವಿವಿಧ ಡ್ರಗ್ಸ್‌ಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ.ಈ ಜಾಲದಲ್ಲಿ ಭಾಗಿಯಾಗಿದ್ದ ಅಂಚೆ ಇಲಾಖೆ ನೌಕರರನ್ನು ದಸ್ತಗಿರಿ ಮಾಡಿ ಕಾನೂನು

		ಕ್ರಮಕ್ಕೆ ಒಳಪಡಿಸಲಾಗಿದೆ. ➢ ವಿದೇಶಗಳಿಂದ ಪ್ರವಾಸಿ, ಶೈಕ್ಷಣಿಕ ವೀಸಾಗಳಲ್ಲಿ ಬರುವ ಕೆಲವು ವ್ಯಕ್ತಿಗಳು ಡ್ರಗ್ಸ್ ಮಾರಾಟದಲ್ಲಿ ತೊಡಗಿದ್ದ ವಿದೇಶಿ ಪ್ರಜೆಯನ್ನು PITNDPS-1988 ಕಾಯ್ದೆ ಅಡಿಯಲ್ಲಿ ಬಂಧನ ಆಜ್ಞೆಯನ್ನು ಹೊರಡಿಸಲಾಗಿದ್ದು, ಇದು ಕರ್ನಾಟಕ ರಾಜ್ಯದಲ್ಲಿ PITNDPS-1988 ಕಾಯ್ದೆ ಅಡಿಯಲ್ಲಿ ಬಂಧನ ಆದೇಶ ಜಾರಿಗೊಳಿಸಿದ ಪ್ರಥಮ ಪ್ರಕರಣವಾಗಿದ್ದು, ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಸಲಹಾ ಮಂಡಳಿಯು ವಿದೇಶಿ ವ್ಯಕ್ತಿಯ ಬಂಧನದ ಆದೇಶವನ್ನು ಪುರಸ್ಕರಿಸಿರುತ್ತದೆ. ➢ ವಿದೇಶಿಯರು ವಾಸಿಸುತ್ತಿರುವ ಪ್ರದೇಶಗಳು, ಮತ್ತು ಕೊಳಚೆ ಪ್ರದೇಶಗಳಲ್ಲಿ ಸಾರ್ವಜನಿಕ ಸಭೆ, ಮೆರವಣಿಗೆಗಳನ್ನು ನಡೆಸುವುದರ ಮೂಲಕ ವ್ಯಾಪಕ ಪ್ರಚಾರ ಕೈಗೊಳ್ಳಲು ಹಾಗೂ ಸಾರ್ವಜನಿಕರಲ್ಲಿ ಮಾದಕ ವಸ್ತುಗಳ ಸೇವನೆ ವಿರುದ್ಧ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ➢ ಜನ ಸಾಮಾನ್ಯರಲ್ಲಿ ಮಾದಕ ವಸ್ತುಗಳ ವಿರುದ್ಧ ಅರಿವು ಮೂಡಿಸುವ ಸಲುವಾಗಿ ಬಿತ್ತಿ ಪತ್ರಗಳನ್ನು, ಸಿನಿಮಾ ಮಂದಿರಗಳಲ್ಲಿ ಸ್ಲೈಡ್ ಶೋ, ಸುದ್ದಿ ಮಾಧ್ಯಮಗಳಲ್ಲಿ ಮಾದಕ ವಸ್ತುಗಳ ಬಳಕೆ ವಿರುದ್ಧ ಸಂದೇಶಗಳನ್ನು ಪ್ರಕಟಿಸುವುದು, ಹೀಗೆ ಜನಸಾಮಾನ್ಯರಲ್ಲಿ ಅರಿವು ಮೂಡಿಸಲಾಗುತ್ತಿದೆ. ➢ ವಿಶ್ವ ಸಂಸ್ಥೆಯ ನಿರ್ದೇಶನದನ್ವಯ ಪ್ರತಿ ವರ್ಷ ಆಗಸ್ಟ್ ಮತ್ತು ಸೆಪ್ಟೆಂಬರ್ ಮಾಹೆಯಲ್ಲಿ ಮಾದಕ ವಸ್ತುಗಳ ಮಾರಾಟ ಮತ್ತು ಸಾಗಣೆಯನ್ನು ತಡೆಗಟ್ಟಲು ರಾಜ್ಯಾದ್ಯಂತ ವಿಶೇಷ ಕಾರ್ಯಾಚರಣೆ ಕೈಗೊಳ್ಳಲಾಗುತ್ತಿದೆ. ಈ ಅವಧಿಯಲ್ಲಿ ಶಾಲಾ ಕಾಲೇಜುಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಮಾದಕ ವಸ್ತುಗಳ ಸೇವನೆಯಿಂದಾಗುವ ದೈಹಿಕ/ ಆರ್ಥಿಕ/ ಸಾಮಾಜಿಕ ದುಷ್ಪರಿಣಾಮಗಳ ಕುರಿತು ವಿಶೇಷ ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ.

ಒಇ 01 ಪಿಎನ್‌ಡಿ 2021

(ಬಸವರಾಜ ಬೊಮ್ಮಾಯಿ)
ಗೃಹ ಸಚಿವರು

6

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	515
ಮಾನ್ಯ ಸದಸ್ಯರ ಹೆಸರು	ಶ್ರೀ ಶ್ರೀನಿವಾಸ್ (ವಾಸು) ಎಸ್.ಆರ್. (ಗುಬ್ಬಿ)
ಉತ್ತರಿಸುವವರು	ಅಬಕಾರಿ ಸಚಿವರು
ಉತ್ತರದ ದಿನಾಂಕ	02-02-2021

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಅಬಕಾರಿ ತೆರಿಗೆಯನ್ನು ಕಡಿಮೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೆ;	ಇರುವುದಿಲ್ಲ.
ಆ)	ಅಬಕಾರಿ ತೆರಿಗೆಯಿಂದ ಸಾರ್ವಜನಿಕರಿಗೆ ಯಾವ ಯಾವ ಅನುಕೂಲಗಳನ್ನು ಕಲ್ಪಿಸಲಾಗುತ್ತಿದೆ (ವಿವರ ನೀಡುವುದು)?	ರಾಜ್ಯದ ಸ್ವಂತ ತೆರಿಗೆ ರಾಜಸ್ವ ಸಂಗ್ರಹಣೆಯಾದ ವಾಣಿಜ್ಯ ತೆರಿಗೆ, ನೋಂದಣಿ ಮತ್ತು ಮುದ್ರಾಂಕ ಶುಲ್ಕ ಮತ್ತು ಮೋಟಾರು ವಾಹನ ತೆರಿಗೆಗಳಂತೆ ಅಬಕಾರಿ ತೆರಿಗೆಯು ಒಂದಾಗಿದ್ದು, ರಾಜ್ಯದ ತೆರಿಗೆ ಸಂಗ್ರಹಣೆಯಲ್ಲಿ ಅಬಕಾರಿ ಇಲಾಖೆಯು 2ನೇ ಸ್ಥಾನದಲ್ಲಿದೆ. ಈ ಇಲಾಖೆಗಳಿಂದ ಸಂಗ್ರಹಿಸಿರುವ ರಾಜಸ್ವವನ್ನು ಆಯವ್ಯಯದಲ್ಲಿ ಘೋಷಿಸಿರುವ ಅಭಿವೃದ್ಧಿ ಕಾರ್ಯಗಳಿಗೆ ಹಾಗೂ ಸಾರ್ವಜನಿಕ ಸಂಬಂಧಿತ ವೆಚ್ಚಗಳಿಗೆ ಬಳಸಲಾಗುತ್ತಿದೆ.

ಆಇ 02 ಇಎಲ್‌ಕ್ಯೂ 2021

(ಕೆ. ಗೋಪಾಲಯ್ಯ)
ಅಬಕಾರಿ ಸಚಿವರು

KARNATAKA LEGISLATIVE ASSEMBLY

Starred Question No.	515
Hon'ble Member	Sri. Srinivas (Vasu) S.R (Gubbi)
To be replied by	Excise Minister
Date of Reply	02-02-2021

Sl. No	Question	Answer
A)	Is there any proposal before the Government to reduce Excise taxes;	No.
B)	What are the benefits being provided to the common people from this Excise Tax (provide details)?	Commercial Tax, Stamps and Registration Fee and Motor Vehicle Tax are States Own Tax Revenue collection departments and Excise Duty is one among them. Excise Department stands 2nd with regard to State's Tax collection. The revenue mobilized from these departments are utilized for development programmes announced in the Budget and public related expenditure.

FD 02 ELQ 2021

(K. GOPALAIAH)
EXCISE MINISTER

ಕರ್ನಾಟಕ ವಿಧಾನಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	414
ಸದಸ್ಯರ ಹೆಸರು	:	ಶ್ರೀ ಪ್ರಿಯಾಂಕ್ ಎಂ.ಖರ್ಗೆ (ಚಿತ್ತಾಪುರ)
ಉತ್ತರಿಸಬೇಕಾದ ದಿನಾಂಕ	:	02.02.2021
ಉತ್ತರಿಸುವ ಸಚಿವರು	:	ಮಾನ್ಯ ಜಲಸಂಪನ್ಮೂಲ ಸಚಿವರು

7

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ.	ಕಲಬುರಗಿ ಜಿಲ್ಲೆಗೆ 2019-20 ಮತ್ತು 2020-21 ನೇ ಸಾಲಿನಲ್ಲಿ ಜಲಸಂಪನ್ಮೂಲ ಇಲಾಖೆ ಮತ್ತು ಸದರಿ ಇಲಾಖೆಯಡಿ ಬರುವ ನಿಗಮಗಳ ವತಿಯಿಂದ ಎಸ್.ಸಿ.ಪಿ. ಮತ್ತು ಟಿ.ಎಸ್.ಪಿ. ಯೋಜನೆಯಡಿ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ;	2019-20 ನೇ ಸಾಲಿನಲ್ಲಿ ಜಲ ಸಂಪನ್ಮೂಲ (ಭಾರಿ ಮತ್ತು ಮಧ್ಯಮ ನೀರಾವರಿ) ಇಲಾಖೆಯ ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ ಹಾಗೂ ಕರ್ನಾಟಕ ನೀರಾವರಿ ನಿಗಮ ನಿಯಮಿತದಿಂದ ಕಲಬುರಗಿ ಜಿಲ್ಲೆಗೆ ಎಸ್.ಸಿ.ಪಿ ಯೋಜನೆಯಡಿ ರೂ.1992.82 ಲಕ್ಷ ಹಾಗೂ ಟಿ.ಎಸ್.ಪಿ ಯೋಜನೆಯಡಿ ರೂ.830.00 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.
ಆ.	ಅನುದಾನ ಬಿಡುಗಡೆ ಮಾಡದಿದ್ದಲ್ಲಿ, ಕಾರಣಗಳೇನು (ವಿವರ ನೀಡುವುದು);	2020-21ನೇ ಸಾಲಿನ ಎಸ್.ಸಿ.ಪಿ/ಟಿ.ಎಸ್.ಪಿ ಅನುದಾನ ಕುರಿತಂತೆ ಆಯವ್ಯಯದಲ್ಲಿ ಜಲ ಸಂಪನ್ಮೂಲ ಇಲಾಖೆಗೆ ಅನುಸೂಚಿತ ಜಾತಿ ಮತ್ತು ಪಂಗಡಗಳಿಗೆ ಒದಗಿಸಲಾಗುವ ಅನುದಾನವನ್ನು ಅಧಿನಿಯಮದ ಕಲಂ 7(ಡಿ) ರನ್ವಯ Deemed Expenditure ಆಗಿ ಪರಿಗಣಿಸುವ ಕುರಿತು ಆರ್ಥಿಕ ಇಲಾಖೆಯು ನಿರ್ದೇಶನ ನೀಡಿದ್ದು, ಸದರಿ ವಿಷಯವಾಗಿ ಸಮಾಜ ಕಲ್ಯಾಣ ಇಲಾಖೆಯ ನಿರ್ದೇಶನ ಕೋರಲಾಗಿದೆ.
ಇ.	2019-20 ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಮಂಜೂರಾದ ಅನುದಾನವು ಈವರೆವಿಗೂ ಬಿಡುಗಡೆಯಾಗದ ಕಾಮಗಾರಿಗಳನ್ನು ನಿರ್ವಹಿಸಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;	2019-20 ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಗೆ ಎಸ್.ಸಿ.ಪಿ & ಟಿ.ಎಸ್.ಪಿ ಯೋಜನೆಯಡಿ ಬಿಡುಗಡೆ ಮಾಡಲಾಗಿರುವ ಅನುದಾನಕ್ಕೆ ಅನುಗುಣವಾಗಿ ಕಾಮಗಾರಿಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ.
ಈ.	ಬಂದಿದ್ದಲ್ಲಿ, ಈ ಕಾಮಗಾರಿಗಳಿಗೆ ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು?	

ಜಸಂಇ 09 ಎಂಎಲ್ಎ 2021

(ರಮೇಶ್ ಎಲ್.ಜಾರಕಿಹೊಳಿ),
ಜಲಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನಸಭೆ

1]	ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ	:	537
2]	ಮಾನ್ಯ ಸದಸ್ಯರ ಹೆಸರು	:	ಶ್ರೀ ಮಹೇಶ್ ಎನ್. (ಕೊಳ್ಳೇಗಾಲ)
3]	ಉತ್ತರಿಸುವ ದಿನಾಂಕ	:	02.02.2021
4]	ಉತ್ತರಿಸುವ ಸಚಿವರು	:	ಗೃಹ, ಕಾನೂನು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳ ಸಂಖ್ಯೆ ಎಷ್ಟು;	ರಾಜ್ಯದಲ್ಲಿ ಒಟ್ಟು 89,333 ವಿವಿಧ ವೃಂದದ ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕರ್ತವ್ಯ ನಿರ್ವಹಿಸುತ್ತಿದ್ದಾರೆ.
ಆ)	ಈ ಅಧಿಕಾರಿ ಮತ್ತು ಸಿಬ್ಬಂದಿಗಳಿಗೆ ವಿವಿಧ ಸವಲತ್ತುಗಳನ್ನು ವಿಸ್ತರಿಸುವ ಸಂಬಂಧ ನೀಡಿರುವ ಔರಾದ್ಕರ್ ವರದಿಯ ಜಾರಿಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು;	6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಪರಿಶೀಲಿಸಲು ರಚಿಸಿದ ಸಮಿತಿಯು ನೀಡಿದ ವರದಿಯನ್ನು ಪರಿಶೀಲಿಸಿದ ಸರ್ಕಾರವು ಆದೇಶ ಸಂಖ್ಯೆ: ಆಇ 09 ಎಸ್‌ಆರ್‌ಪಿ 2019, ದಿನಾಂಕ:16-7-2019 ರಲ್ಲಿ 05 ವಿವಿಧ ವೃಂದದ ಪೊಲೀಸ್ ಅಧಿಕಾರಿಗಳ / ಸಿಬ್ಬಂದಿಗಳ ವೇತನವನ್ನು ಪರಿಷ್ಕರಿಸಿ ಆದೇಶಿಸಿದೆ. (ಪ್ರತಿ ಲಗತ್ತಿಸಿದೆ) ಹಾಗೂ ಸರ್ಕಾರದ ವಿವಿಧ ಆದೇಶಗಳಲ್ಲಿ ಸಮವಸ್ತ್ರ ಭತ್ಯೆ, ಸಾರಿಗೆ ಭತ್ಯೆ ಹಾಗೂ ಕಷ್ಟಪರಿಹಾರ ಭತ್ಯೆಗಳನ್ನು ಈಗಾಗಲೇ ಮಂಜೂರು ಮಾಡಿ ಆದೇಶಿಸಿದೆ. ಒಟ್ಟಾರೆಯಾಗಿ ಸದರಿ ಸಮಿತಿಯ ಶಿಫಾರಸ್ಸುಗಳ ಅನುಷ್ಠಾನದಿಂದ ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ 84,773 ಅಧಿಕಾರಿ ಮತ್ತು ಸಿಬ್ಬಂದಿಯವರುಗಳಿಗೆ ಅನುಕೂಲ ವಾಗಿರುತ್ತದೆ. ಇನ್ನುಳಿದ 04 ವೃಂದದ ಅಧಿಕಾರಿ/ಸಿಬ್ಬಂದಿಗಳ ವೇತನ ಶ್ರೇಣಿಯನ್ನು ಪರಿಷ್ಕರಿಸುವ ಕುರಿತಂತೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.
ಇ)	ಈ ವರದಿಯನ್ನು ಸಂಪೂರ್ಣವಾಗಿ ಜಾರಿ ಮಾಡಲಾಗಿದೆಯೇ; ಜಾರಿ ಮಾಡಲಾಗದಿದ್ದಲ್ಲಿ ಕಾರಣಗಳೇನು;	
ಈ)	ಯಾವ ಕಾಲಮಿತಿಯಲ್ಲಿ ಈ ವರದಿಯನ್ನು ಸಂಪೂರ್ಣವಾಗಿ ಜಾರಿ ಮಾಡಲಾಗುವುದು?	

ಹೆಚ್‌ಡಿ 15 ಇಎಫ್‌ಎಸ್ 2021

[ಬಸವರಾಜ ಬೊಮ್ಮಾಯಿ]
ಗೃಹ, ಕಾನೂನು, ಸಂಸದೀಯ ವ್ಯವಹಾರಗಳು
ಮತ್ತು ಶಾಸನ ರಚನೆ ಸಚಿವರು

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪೊಲೀಸ್ ಇಲಾಖೆಯ ಕೆಲವೊಂದು ವರ್ಗದ ಹುದ್ದೆಗಳ ವೇತನ ಶ್ರೇಣಿಯನ್ನು ಮೇಲ್ದರ್ಜೆಗೇರಿಸುವ 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸುಗಳನ್ನು ಅನುಷ್ಠಾನಗೊಳಿಸುವ ಕುರಿತು.

ಓದಲಾಗಿದೆ:

1. ದಿನಾಂಕ: 01-06-2017ರ ಸರ್ಕಾರಿ ಆದೇಶ ಸಂಖ್ಯೆ: ಆಇ 22 ಎಸ್ಆರ್‌ಪಿ 2017.
2. ದಿನಾಂಕ: 01-03-2018ರ ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ 06 ಎಸ್ಆರ್‌ಪಿ 2018.
3. ದಿನಾಂಕ: 19-04-2018ರ ಸರ್ಕಾರಿ ಅಧಿಸೂಚನೆ ಸಂಖ್ಯೆ: ಎಫ್‌ಡಿ 06 ಎಸ್ಆರ್‌ಪಿ 2018.
4. ದಿನಾಂಕ: 29-05-2019ರ ಸರ್ಕಾರಿ ಆದೇಶ ಸಂಖ್ಯೆ: ಆಇ 36 ಎಸ್ಆರ್‌ಪಿ 2018.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ದಿನಾಂಕ: 01-06-2017ರ ಸರ್ಕಾರಿ ಆದೇಶದನ್ವಯ ರಚಿಸಲ್ಪಟ್ಟಿದ್ದ 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ ಮುಖ್ಯ ವೇತನ ಶ್ರೇಣಿ ಮತ್ತು 25 ಸ್ಥಾಯಿ ವೇತನ ಶ್ರೇಣಿಗಳು, ಪಿಂಚಣಿ/ಕುಟುಂಬ ಪಿಂಚಣಿ ಮತ್ತು ಇತರೆ ನಿರ್ದಿಷ್ಟ ಭತ್ಯೆಗಳನ್ನು ಮೇಲೆ (2)ರಲ್ಲಿ ಓದಲಾದ ದಿನಾಂಕ:01-03-2018ರ ಆದೇಶದಲ್ಲಿ ಪರಿಷ್ಕರಿಸಿ ಆದೇಶಗಳನ್ನು ಹೊರಡಿಸಲಾಗಿರುತ್ತದೆ.

6ನೇ ರಾಜ್ಯ ವೇತನ ಆಯೋಗವು ಸಂಪುಟ-2ರ ತನ್ನ ವರದಿಯಲ್ಲಿ ಸರ್ಕಾರದ 28 ವಿವಿಧ ಇಲಾಖೆಗಳ ವಿವಿಧ ವೃಂದಗಳ ವೇತನ ಶ್ರೇಣಿಗಳನ್ನು ಮೇಲ್ದರ್ಜೆಗೇರಿಸುವ ಮತ್ತು ನಿರ್ದಿಷ್ಟ ಹುದ್ದೆಗಳಿಗೆ ವಿಶೇಷ ಭತ್ಯೆಯನ್ನು ಮಂಜೂರು ಮಾಡಲು ಶಿಫಾರಸ್ಸು ಮಾಡಿರುತ್ತದೆ. ಆದುದರಿಂದ, ವೇತನ ಆಯೋಗದ ಎರಡನೇ ಸಂಪುಟದಲ್ಲಿನ ಶಿಫಾರಸ್ಸುಗಳನ್ನು ಪರಿಶೀಲಿಸಲು, ಸರ್ಕಾರವು ಮೇಲೆ (4)ರಲ್ಲಿ ಓದಲಾದ ದಿನಾಂಕ: 29-05-2019ರ ಸರ್ಕಾರಿ ಆದೇಶದಲ್ಲಿ ಅಧಿಕಾರಿ ಸಮಿತಿಯನ್ನು ರಚಿಸಿರುತ್ತದೆ.

6ನೇ ರಾಜ್ಯ ವೇತನ ಆಯೋಗವು ಶ್ರೀ ರಾಘವೇಂದ್ರ ಔರಾದಕರ್ ಸಮಿತಿಯ ಶಿಫಾರಸ್ಸಿನ ಬೆಳಕಿನಲ್ಲಿ ಒಳಾಡಳಿತ ಇಲಾಖೆಯ ಪ್ರಸ್ತಾವನೆಯನ್ನು ಪರಿಶೀಲಿಸಿ, ಪೊಲೀಸ್ ಇಲಾಖೆಯಲ್ಲಿನ ನಿರ್ದಿಷ್ಟ ವೃಂದಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಪೊಲೀಸ್ ಸಿಬ್ಬಂದಿಗಳ ವೇತನ ಶ್ರೇಣಿಗಳನ್ನು

ಮೇಲ್ದರ್ಜೆಗೇರಿಸಲು ಶಿಫಾರಸ್ಸು ಮಾಡಿರುತ್ತದೆ. ವೇತನ ಆಯೋಗದ ಶಿಫಾರಸ್ಸುಗಳು ಮತ್ತು ಸಂವಾದಿ 2018ರ ವೇತನ ಶ್ರೇಣಿಗಳು ಈ ಕೆಳಕಂಡಂತಿರುತ್ತವೆ:

ಕ್ರ ಸಂ.	ಪೊಲೀಸ್ ಇಲಾಖೆಯಲ್ಲಿನ ವೃಂದ/ಹುದ್ದೆ	ಪ್ರಸ್ತುತ 2012ರ ಪರಿಷ್ಕೃತ ವೇತನ ಶ್ರೇಣಿ (ರೂ.)	ಶಿಫಾರಸ್ಸು ಮಾಡಲಾದ 2012ರ ಪರಿಷ್ಕೃತ ವೇತನ ಶ್ರೇಣಿ (ರೂ.)	ಸಂವಾದಿ 2018ರ ಪರಿಷ್ಕೃತ ವೇತನ ಶ್ರೇಣಿ (ರೂ.)
1	ಪೊಲೀಸ್ ಪೇದೆಗಳು/ಮೀಸಲು ಪೊಲೀಸ್ ಪೇದೆಗಳು	11,600–21,000	12,500–24,000	23,500–47,650
2	ಮುಖ್ಯ ಪೇದೆಗಳು	12,500–24,000	14,550–26,700	27,650–52,650
3	ಸಹಾಯಕ ಸಬ್‌ಇನ್ಸ್‌ಪೆಕ್ಟರ್	14,550–26,700	16,000–29,600	30,350–58,250
4	ಪೊಲೀಸ್ ಇನ್ಸ್‌ಪೆಕ್ಟರ್	21,600–40,050	22,800–43,200	43,100–83,900
5	ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ನಾನ್–ಐಪಿಎಸ್)	36,300–53,850	38,100–55,200	70,850–1,07,100

ಪೊಲೀಸ್ ಇಲಾಖೆಯಲ್ಲಿನ ಈ ಮೇಲಿನ ವೃಂದಗಳ ಗುರುತರ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು ಗಮನದಲ್ಲಿರಿಸಿ, ಈ ಹುದ್ದೆಗಳಿಗೆ ನಿಗದಿಪಡಿಸಲಾದ ವೇತನ ಶ್ರೇಣಿಗಳನ್ನು 6ನೇ ರಾಜ್ಯ ವೇತನ ಆಯೋಗದ ಶಿಫಾರಸ್ಸಿನಂತೆ ಪರಿಷ್ಕರಿಸಲು ಸರ್ಕಾರವು ನಿರ್ಧರಿಸಿರುತ್ತದೆ.

ಅದರಂತೆ, ಈ ಕೆಳಗಿನ ಆದೇಶಗಳನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಆಇ 9 ಎಸ್‌ಆರ್‌ಪಿ 2019
ಬೆಂಗಳೂರು, ದಿನಾಂಕ: 16ನೇ ಜುಲೈ 2019

ಪ್ರಸ್ತಾವನೆಯಲ್ಲಿ ವಿವರಿಸಲಾದ ವಾಸ್ತವಾಂಶಗಳ ಹಿನ್ನೆಲೆಯಲ್ಲಿ ಮತ್ತು ಕರ್ನಾಟಕ ನಾಗರಿಕ ಸೇವಾ (ಪರಿಷ್ಕೃತ ವೇತನ) ನಿಯಮಗಳು, 2018ರ ನಿಯಮ (4)ರ ಉಪ–ನಿಯಮ (2)ರಡಿ ಪ್ರದತ್ತವಾದ ಅಧಿಕಾರದನ್ವಯ, ಪೊಲೀಸ್ ಇಲಾಖೆಯಲ್ಲಿನ ಈ ಕೆಳಗಿನ ವೃಂದಗಳಿಗೆ ಅನ್ವಯಿಸುವ ವೇತನ ಶ್ರೇಣಿಗಳನ್ನು ದಿನಾಂಕ: 01–08–2019ರಿಂದ ಜಾರಿಗೆ ಬರುವಂತೆ ಪರಿಷ್ಕರಿಸಲು ಸರ್ಕಾರವು ಹರ್ಷಿಸುತ್ತದೆ.

ಕ್ರ ಸಂ.	ಪೊಲೀಸ್ ಇಲಾಖೆಯ ವೃಂದ/ಹುದ್ದೆ	2018ರ ಪರಿಷ್ಕೃತ ವೇತನ ಶ್ರೇಣಿ (ರೂ.)
1	ಪೊಲೀಸ್ ಪೇದೆಗಳು/ಮೀಸಲು ಪೊಲೀಸ್ ಪೇದೆಗಳು	23,500–47,650
2	ಮುಖ್ಯ ಪೇದೆಗಳು	27,650–52,650

3	ಸಹಾಯಕ ಸಬ್‌ಇನ್ಸ್‌ಪೆಕ್ಟರ್	30,350–58,250
4	ಪೊಲೀಸ್ ಇನ್ಸ್‌ಪೆಕ್ಟರ್	43,100–83,900
5	ಸೂಪರಿಂಟೆಂಡೆಂಟ್ ಆಫ್ ಪೊಲೀಸ್ (ನಾನ್–ಐಪಿಎಸ್)	70,850–1,07,100

2. ಈ ಮೇಲೆ ಸಮೂದಿಸಿರುವ ವೃಂದಗಳಲ್ಲಿ ಹುದ್ದೆಗಳನ್ನು ಧಾರಣೆ ಮಾಡಿರುವ ಸಿಬ್ಬಂದಿಗಳ ವೇತನವನ್ನು ಕರ್ನಾಟಕ ನಾಗರಿಕ ಸೇವಾ ನಿಯಮಗಳ ನಿಯಮ 43ರಲ್ಲಿನ ಅವಕಾಶಗಳನ್ವಯ ನಿಗದಿಪಡಿಸತಕ್ಕದ್ದು.

3. ವೇತನ ನಿಗದೀಕರಣಕ್ಕೆ ಸಂಬಂಧಿಸಿದಂತೆ ಆದೇಶಗಳು/ಅಧಿಸೂಚನೆಗಳು/ನಿಯಮಗಳಲ್ಲಿ ತಿಳಿಸಿರುವ ಷರತ್ತು ಮತ್ತು ನಿಬಂಧನೆಗಳು ಮುಂದುವರೆದು ಅನ್ವಯಿಸುತ್ತವೆ.

4. ಈ ಮೇಲಿನ ಪರಿಷ್ಕೃತ ವೇತನ ಶ್ರೇಣಿಗಳಲ್ಲಿ ವೇತನ ನಿಗದಿಪಡಿಸುವಲ್ಲಿ ಸಮಸ್ಯೆಗಳು ಉಂಟಾದಲ್ಲಿ ಅದನ್ನು ಆದೇಶಕ್ಕಾಗಿ ಸರ್ಕಾರಕ್ಕೆ ಸಲ್ಲಿಸುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಡಿ.ಎಸ್.ಜೋಗೋಜಿ)
ಸರ್ಕಾರದ ಉಪ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು–2).

ಸಂಕಲನಕಾರರು, ಕರ್ನಾಟಕ ಗೆಜೆಟ್, ಮುಂದಿನ ಸಂಚಿಕೆಯಲ್ಲಿ ಪ್ರಕಟಿಸುವುದಕ್ಕಾಗಿ ಹಾಗೂ 50 ಪ್ರತಿಗಳನ್ನು ಆರ್ಥಿಕ ಇಲಾಖೆಗೆ ಸರಬರಾಜು ಮಾಡಲು.

ಇವರಿಗೆ:

1. ಸರ್ಕಾರದ ಮುಖ್ಯ ಕಾರ್ಯದರ್ಶಿ/ಅಪರ ಮುಖ್ಯ ಕಾರ್ಯದರ್ಶಿಗಳು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು/ ಕಾರ್ಯದರ್ಶಿಗಳು.
3. ಘನತೆವೆತ್ತ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ, ರಾಜಭವನ, ಬೆಂಗಳೂರು–1
4. ಪ್ರಧಾನ ಮಹಾಲೇಖಪಾಲರು (G&SSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ,(ಪಿ.ಬಿ. ನಂ.5398) ಬೆಂಗಳೂರು.
5. ಪ್ರಧಾನ ಮಹಾಲೇಖಪಾಲರು (E&RSA), ಕರ್ನಾಟಕ, ಹೊಸ ಕಟ್ಟಡ, ಆಡಿಟ್ ಭವನ,(ಪಿ.ಬಿ. ನಂ.5398) ಬೆಂಗಳೂರು.
6. ಪ್ರಧಾನ ಮಹಾಲೇಖಪಾಲರು (ಲೆಕ್ಕಗಳು ಮತ್ತು ಹಕ್ಕುಗಳು), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, (ಪಿ.ಬಿ. ನಂ.5329) ಬೆಂಗಳೂರು.
7. ರಿಜಿಸ್ಟ್ರಾರ್ ಜನರಲ್, ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು
8. ರಿಜಿಸ್ಟ್ರಾರ್, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು
9. ಡೈರೆಕ್ಟರ್ ಜನರಲ್ & ಇನ್ಸ್‌ಪೆಕ್ಟರ್ ಜನರಲ್ ಆಫ್ ಪೊಲೀಸ್, ನೃಪತುಂಗ ರೋಡ್, ಬೆಂಗಳೂರು.
10. ಕಾರ್ಯದರ್ಶಿ, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
11. ಕಾರ್ಯದರ್ಶಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರ, ವಿಧಾನಸೌಧ, ಬೆಂಗಳೂರು.
12. ಸರ್ಕಾರದ ಉಪ ಕಾರ್ಯದರ್ಶಿ, ಸಚಿವ ಸಂಪುಟ ಶಾಖೆ, ವಿಧಾನ ಸೌಧ, ಬೆಂಗಳೂರು.
13. ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳು.
14. ಎಲ್ಲಾ ಜಿಲ್ಲೆಗಳ ಸೂಪರಿಂಟೆಂಡೆಂಟ್ ಆಫ್ ಪೊಲೀಸ್
15. ಖಜಾನೆ ಅಧಿಕಾರಿ, ರಾಜ್ಯ ಹುಜೂರು ಖಜಾನೆ/ಜಿಲ್ಲಾ ಖಜಾನೆಗಳು.
16. ನಿರ್ದೇಶಕರು, ಕರ್ನಾಟಕ ರಾಜ್ಯ ಪತ್ರಾಗಾರ ಇಲಾಖೆ, ವಿಕಾಸ ಸೌಧ, ಬೆಂಗಳೂರು.
17. ಪ್ರಾಜೆಕ್ಟ್ ಆಫೀಸರ್, ಹೆಚ್.ಆರ್.ಎಂ.ಎಸ್., ಕೊಠಡಿ ಸಂಖ್ಯೆ:145'A', ಬಹುಮಹಡಿಗಳ ಕಟ್ಟಡ, ಬೆಂಗಳೂರು.
18. ಕರ್ನಾಟಕ ಸರ್ಕಾರ ಸಚಿವಾಲಯದ ಗ್ರಂಥಾಲಯ/ವಿಧಾನ ಮಂಡಲದ ಗ್ರಂಥಾಲಯ.
19. ವಾರಪತ್ರ/ಶಾಖೆಯ ರಕ್ಷಾ ಕಡತ.

ಕರ್ನಾಟಕ ವಿಧಾನ ಸಭೆ

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 385
2) ಸದಸ್ಯರ ಹೆಸರು : ಶ್ರೀ ಯಶವಂತರಾಯಗೌಡ ವಿಠ್ಠಲಗೌಡ ಪಾಟೀಲ್ (ಇಂಡಿ)
3) ಉತ್ತರಿಸುವ ದಿನಾಂಕ: : 02-02-2021
4) ಉತ್ತರಿಸುವವರು : ಮಾನ್ಯ ಮುಖ್ಯಮಂತ್ರಿಗಳು

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ)	ಕಳೆದ ಎರಡು ವರ್ಷಗಳಲ್ಲಿ ಕೇಂದ್ರ ಸರ್ಕಾರದಿಂದ ಸರಕು ಮತ್ತು ಸೇವಾ ತೆರಿಗೆಗಳಿಂದ (ಜಿ.ಎಸ್.ಟಿ.) ರಾಜ್ಯ ಸರ್ಕಾರಕ್ಕೆ ಬಂದ ಜಿ.ಎಸ್.ಟಿ. ಪರಿಹಾರ ಮೊತ್ತವೆಷ್ಟು; (ವಿವರ ನೀಡುವುದು);	ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರವು 2018-19ನೇ ಸಾಲಿನಲ್ಲಿ ರೂ.18340.00 ಕೋಟಿಗಳು, 2019-20ನೇ ಸಾಲಿನಲ್ಲಿ ರೂ.20106.00 ಕೋಟಿಗಳು ಮತ್ತು 2020-21ನೇ ಸಾಲಿನಲ್ಲಿ ಇಲ್ಲಿಯವರೆಗೂ (ಜನವರಿ-2021) ರೂ.3553.00 ಕೋಟಿಗಳ ಜಿ.ಎಸ್.ಟಿ. ನಷ್ಟ ಪರಿಹಾರ ಮೊತ್ತವನ್ನು ಹಾಗೂ ರೂ.9721.00ಕೋಟಿಗಳ ಮೊತ್ತವನ್ನು ನಷ್ಟ ಪರಿಹಾರ ಸಾಲವಾಗಿ ಸ್ವೀಕರಿಸಲಾಗಿರುತ್ತದೆ. 2020-21ನೇ ಸಾಲಿಗೆ ಪರಿಹಾರ ಮತ್ತು ಪರಿಹಾರ ಸಾಲ ಸೇರಿ ಒಟ್ಟು ರೂ.13274.00 ಕೋಟಿಗಳ ಮೊತ್ತವನ್ನು ಸ್ವೀಕರಿಸಲಾಗಿದೆ.
ಆ)	ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಎಷ್ಟು ಜಿ.ಎಸ್.ಟಿ. ಪರಿಹಾರ ಬಾಕಿ ಬರಬೇಕಾಗಿದೆ; ಇದುವರೆಗೂ ಸದರಿ ಮೊತ್ತ ಬಿಡುಗಡೆಯಾಗದಿರಲು ಕಾರಣಗಳೇನು; (ವಿವರ ನೀಡುವುದು)	2019-20ನೇ ಆರ್ಥಿಕ ವರ್ಷದಲ್ಲಿ ಯಾವುದೇ ನಷ್ಟ ಪರಿಹಾರ ಮೊತ್ತ ಬಾಕಿ ಇರುವುದಿಲ್ಲ. ಪ್ರಸ್ತುತ ಆರ್ಥಿಕ ವರ್ಷದಲ್ಲಿ ಈವರೆವಿಗೆ ರೂ.3553.00 ಕೋಟಿಗಳ ನಷ್ಟ ಪರಿಹಾರ ಮೊತ್ತ ಸ್ವೀಕರಿಸಲಾಗಿದೆ ಹಾಗೂ ಕೇಂದ್ರ ಸರ್ಕಾರವು ಸಾಲದ ಮೂಲಕ ರೂ.12047.00 ಕೋಟಿಗಳ ಮೊತ್ತದಷ್ಟು ಪರಿಹಾರ ಒದಗಿಸುತ್ತದೆ. ರೂ.9721.00 ಕೋಟಿಗಳ ಪರಿಹಾರ ಮೊತ್ತವನ್ನು ಕರ್ನಾಟಕಕ್ಕೆ ಒದಗಿಸಿದೆ.
ಇ)	ಬಾಕಿ ಬಿಡುಗಡೆಯಾಗಬೇಕಾಗಿರುವ ಪರಿಹಾರ ಮೊತ್ತವನ್ನು ಕೂಡಲೇ ಬಿಡುಗಡೆ ಮಾಡುವಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರದ ಮೇಲೆ ಒತ್ತಡ ತರಲು ಯಾವ ಕ್ರಮಗಳನ್ನು ಕೈಗೊಂಡಿದೆ? (ವಿವರ ನೀಡುವುದು)	ಬಾಕಿ ಪರಿಹಾರಕ್ಕೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರವು ರಾಜ್ಯಕ್ಕೆ ಎರಡು ಆಯ್ಕೆಗಳನ್ನು ತಿಳಿಸಿದ್ದು, ರಾಜ್ಯವು ಆಯ್ಕೆ-1 ನ್ನು ಆಯ್ಕೆ ಮಾಡಿಕೊಂಡಿದೆ. ಅದರನ್ವಯ ಪ್ರಸಕ್ತ ವರ್ಷಕ್ಕೆ ರೂ.12047.00 ಕೋಟಿ ಮೊತ್ತವನ್ನು ಕೇಂದ್ರ ಸರ್ಕಾರವು ಸಾಲ ಪಡೆದು ರಾಜ್ಯಕ್ಕೆ ಒದಗಿಸಲಿದ್ದು, ರೂ.9721.00 ಕೋಟಿ ಪರಿಹಾರ ಮೊತ್ತವನ್ನು ಈಗಾಗಲೇ ಬಿಡುಗಡೆ ಮಾಡಿದೆ. ಉಳಿದ ಪರಿಹಾರ ಮೊತ್ತವನ್ನು ಈ ವರ್ಷ ಹಾಗೂ ಮುಂದಿನ ವರ್ಷಗಳಲ್ಲಿ ಜಿ.ಎಸ್.ಟಿ. ಸೆಸ್ ಸ್ವೀಕೃತಿ ಮೊತ್ತದಿಂದ ಸಂಪೂರ್ಣವಾಗಿ ಕೇಂದ್ರ ಸರ್ಕಾರವು ಒದಗಿಸಲಿದೆ.

ಸಂಖ್ಯೆ: ಆಇ 05 ಸಿಎಸ್‌ಎಲ್ 2021

(ಬಿ.ಎಸ್. ಯಡಿಯೂರಪ್ಪ)
ಮುಖ್ಯಮಂತ್ರಿ.

ಜಿಎಸ್‌ಟಿ ಅಡಿಯಲ್ಲಿ ನಷ್ಟ ಪರಿಹಾರ – ಒಂದು ಟಿಪ್ಪಣಿ

1. ಜುಲೈ 2017 ರಿಂದ ದೇಶದಾದ್ಯಂತ ಜಾರಿಗೊಂಡ ಸರಕು ಮತ್ತು ಸೇವಾ ತೆರಿಗೆ ಪದ್ಧತಿಯಿಂದ ರಾಜ್ಯಗಳಿಗೆ ಉಂಟಾಗಿರುವ ರಾಜಸ್ವ ನಷ್ಟಕ್ಕಾಗಿ ರಾಜ್ಯಗಳಿಗೆ ಪರಿಹಾರವನ್ನು ಒದಗಿಸಲಾಗುತ್ತಿದೆ. ರಾಜ್ಯಗಳಿಗೆ ನೀಡಲಾಗುತ್ತಿರುವ ನಷ್ಟ ಪರಿಹಾರ ಸಂವಿಧಾನಾತ್ಮಕವಾಗಿದ್ದು, ಸ್ಪಷ್ಟವಾದ ಕಾನೂನಿನ ಚೌಕಟ್ಟು ಮತ್ತು ರಚನೆಯನ್ನು ಹೊಂದಿರುತ್ತದೆ.

2. 101 ನೇ ಸಂವಿಧಾನ ತಿದ್ದುಪಡಿ ಕಾಯ್ದೆ, 2016ರ ಅಡಿಯಲ್ಲಿ, ಸರಕು ಮತ್ತು ಸೇವಾ ತೆರಿಗೆ ಪರಿಷತ್ತಿನ ಶಿಫಾರಸ್ಸಿನಂತೆ, ಸೂಕ್ತವಾದ ಕಾನೂನನ್ನು ರೂಪಿಸಿ, ಸರಕು ಮತ್ತು ಸೇವಾ ತೆರಿಗೆ ಪದ್ಧತಿಯ ಜಾರಿಯಿಂದ ರಾಜ್ಯಗಳಿಗೆ ಉಂಟಾದ ರಾಜಸ್ವ ನಷ್ಟಕ್ಕೆ ಐದು ವರ್ಷಗಳ ಕಾಲ ಪರಿಹಾರವನ್ನು ಒದಗಿಸುವುದು ಸಂಸತ್ತಿನ ಜವಾಬ್ದಾರಿಯಾಗಿರುತ್ತದೆ. ಐದು ವರ್ಷಗಳ ನಷ್ಟ ಪರಿಹಾರ ಅವಧಿಯು 2022 ರ ಜುಲೈಗೆ ಮುಕ್ತಾಯಗೊಳ್ಳುತ್ತದೆ. ಉಲ್ಲೇಖಿತ ಸಂವಿಧಾನ ತಿದ್ದುಪಡಿಗೆ ಅನುಗುಣವಾಗಿ, ಸರಕು ಮತ್ತು ಸೇವಾ ತೆರಿಗೆ (ರಾಜ್ಯಗಳಿಗೆ ನಷ್ಟ ಪರಿಹಾರ) ಕಾಯ್ದೆ, 2017 ನ್ನು ಈಗಾಗಲೇ ಜಾರಿಗೆ ತರಲಾಗಿದೆ. ಸದರಿ ಕಾಯ್ದೆಯ 7 ನೇ ಪ್ರಕರಣದಂತೆ, ಮಧ್ಯಂತರ ಅವಧಿಯಲ್ಲಿ ಯಾವುದೇ ರಾಜ್ಯಕ್ಕೆ ನಷ್ಟ ಪರಿಹಾರ ಒದಗಿಸುವುದು ಸಂಸತ್ತಿನ ಜವಾಬ್ದಾರಿಯಾಗಿರುತ್ತದೆ.

3. ಉಲ್ಲೇಖಿತ ಸಂವಿಧಾನ ತಿದ್ದುಪಡಿ ಮತ್ತು ಜಾರಿಗೊಳಿಸಲಾದ ಕಾನೂನಿನ ಅನುಪಾಲನೆಯಂತೆ, ಸರಕು ಮತ್ತು ಸೇವಾ ತೆರಿಗೆ ಪದ್ಧತಿ ಜಾರಿಗೊಳಿಸಿದಾಗಿನಿಂದ ರಾಜ್ಯಗಳಿಗೆ ನಷ್ಟ ಪರಿಹಾರವನ್ನು ಒದಗಿಸಲಾಗುತ್ತದೆ. ಯಾವುದೇ ರಾಜ್ಯಕ್ಕೆ ಉಲ್ಲೇಖಿತ ಕಾನೂನಿನ ಅಡಿಯಲ್ಲಿ ನಿರ್ದಿಷ್ಟ ಅವಧಿಗೆ ನಿರ್ಧರಿಸಲಾಗಿರುವ ಸಂರಕ್ಷಿತ ರಾಜಸ್ವದ ಮೊತ್ತಕ್ಕಿಂತ ಕಡಿಮೆ ರಾಜಸ್ವ ಸಂಗ್ರಹಣೆಯಾದಲ್ಲಿ, ಆ ರಾಜ್ಯಕ್ಕೆ/ಗಳಿಗೆ ನಷ್ಟ ಪರಿಹಾರವನ್ನು ಭಾರತ ಸರಕಾರವು ಸದರಿ ಕಾಯ್ದೆಯಲ್ಲಿ ಸೂಚಿಸಿರುವಂತೆ ನೀಡುತ್ತಿದೆ.

4. ಈ ಮಧ್ಯಂತರ ಅವಧಿಯ ಯಾವುದೇ ವರ್ಷಕ್ಕೆ ನೀಡಬೇಕಾಗಿರುವ ನಷ್ಟ ಪರಿಹಾರವನ್ನು 2015–16ರ ಆರ್ಥಿಕ ವರ್ಷವನ್ನು ಮೂಲವಾಗಿಟ್ಟುಕೊಂಡು ನಿರ್ಧರಿಸಲಾಗಿರುತ್ತದೆ. 2015–16ರ ಆರ್ಥಿಕ ವರ್ಷದ ರಾಜಸ್ವ ಸಂಗ್ರಹಣೆಯನ್ನು ಮೂಲವಾಗಿಟ್ಟುಕೊಂಡು, ವಾರ್ಷಿಕ ಶೇ.14ರ ಕಲ್ಪಿತ ಬೆಳವಣಿಗೆ ದರದಂತೆ, ರಾಜ್ಯಗಳ ಸಂರಕ್ಷಿತ ರಾಜಸ್ವವನ್ನು ನಿಗದಿಪಡಿಸಲಾಗಿದೆ. ಕರ್ನಾಟಕ ರಾಜ್ಯದ 2015–16ರ ಮೂಲ ವರ್ಷದ ರಾಜಸ್ವವು ರೂ. 36,144 ಕೋಟಿಗಳಾಗಿತ್ತು. ಈ ಮೊತ್ತದ ಮೇಲೆ ಶೇ.14ರ ಬೆಳವಣಿಗೆಯಂತೆ ಲಭ್ಯವಾಗುವ ಮೊತ್ತವು ಉಲ್ಲೇಖಿತ ಕಾಯ್ದೆ ಅಡಿಯಲ್ಲಿ, ನಮ್ಮ ರಾಜ್ಯದ ಸಂರಕ್ಷಿತ ರಾಜಸ್ವವಾಗಿರುತ್ತದೆ. ಅದರಂತೆ ರಾಜ್ಯದ ಸಂರಕ್ಷಿತ ರಾಜಸ್ವದ ವಿವರಗಳು ಈ ಕೆಳಗಿನಂತಿರುತ್ತವೆ.

ವರ್ಷ	ಶೇ.14ರ ಬೆಳವಣಿಗೆ ದರದಲ್ಲಿ ಲೆಕ್ಕಮಾಡಲಾದ ಸಂರಕ್ಷಿತ ರಾಜಸ್ವ (ಕೋಟಿ ರೂ.ಗಳಲ್ಲಿ)
2015–16	36144
2016–17	41205
2017–18	46973
2018–19	53549
2019–20	61046
2020–21	69593
2021–22	79336

5. ಜುಲೈ 2017 ರಿಂದ ರಾಜ್ಯಗಳು ದ್ವೈಮಾಸಿಕ ಆಧಾರದ ಮೇಲೆ ನಷ್ಟ ಪರಿಹಾರವನ್ನು ಪಡೆದುಕೊಳ್ಳುತ್ತಿವೆ. ಕರ್ನಾಟಕದ ಜಿಎಸ್‌ಟಿ ಅಡಿಯಲ್ಲಿನ ರಾಜಸ್ವ ಸಂಗ್ರಹಣೆಯು 2017 ರಿಂದ ಸಂರಕ್ಷಿತ ರಾಜಸ್ವಕ್ಕಿಂತ ಕಡಿಮೆ ಇರುತ್ತದೆ. ಇದು ಜಿಎಸ್‌ಟಿಯ ರಚನೆಯ (ತೆರಿಗೆ ದರಗಳು ಹಾಗೂ ಬಳಕೆಯ ಆಧಾರಿತ) ಹಾಗೂ ಅನುಷ್ಠಾನದ ಅಂಶಗಳನ್ನೂ ಒಳಗೊಂಡ ಸಾಕಷ್ಟು ಕಾರಣಗಳನ್ನು ಒಳಗೊಂಡಿದೆ. ಮೌಲ್ಯವರ್ಧಿತ ತೆರಿಗೆ ಪದ್ಧತಿಯಲ್ಲಿ, ಬಹುತೇಕ ಸರಕುಗಳ ಮೇಲಿನ ಸರಾಸರಿ ತೆರಿಗೆ ದರವು ಶೇ.14 ರಷ್ಟು ಇತ್ತು. ಜಿಎಸ್‌ಟಿ ಅನುಷ್ಠಾನದ ನಂತರ, ಬಹುತೇಕ ಸರಕುಗಳಿಗೆ ಶೇ.5, ಶೇ.12, ಶೇ.18 ಹಾಗೂ ಶೇ.28 ರ ತೆರಿಗೆ ದರಗಳನ್ನು ವಿಧಿಸಲಾಯಿತು. ಇದರಲ್ಲಿ ಎಸ್‌ಜಿಎಸ್‌ಟಿ (ರಾಜ್ಯದ ಪಾಲು) ಶೇ.2.5, ಶೇ.9 ಮತ್ತು ಶೇ.14 ಮಾತ್ರ ಇರುತ್ತದೆ. ಇದು ಮೌಲ್ಯವರ್ಧಿತ ತೆರಿಗೆ ಅಡಿಯಲ್ಲಿನ ಸರಾಸರಿ ಶೇ.14 ರ ದರಕ್ಕಿಂತ ಕಡಿಮೆ ಆಗಿರುವುದರಿಂದ ರಾಜಸ್ವ ಸಂಗ್ರಹಣೆ ಕುಂಠಿತವಾಗಿರುತ್ತದೆ. ಜೊತೆಗೆ, ಸರಕು ಮತ್ತು ಸೇವಾ ತೆರಿಗೆ ಪರಿಷತ್ತು ಕಳೆದೆರಡು ವರ್ಷಗಳಲ್ಲಿ ಸರಕುಗಳ ಮೇಲೆ ತೆರಿಗೆ ದರವನ್ನು ಕಡಿತಗೊಳಿಸುತ್ತಾ ಬಂದಿರುತ್ತದೆ. ಇದು ಜಿಎಸ್‌ಟಿ ಅನುಷ್ಠಾನದ ನಂತರ ರಾಜಸ್ವ ಸಂಗ್ರಹಣೆಯ ಮೇಲೆ ಪರಿಣಾಮವನ್ನು ಬೀರಿರುತ್ತದೆ. ಕರ್ನಾಟಕವು ಎಸ್‌ಜಿಎಸ್‌ಟಿ ಸಂಗ್ರಹಣೆಯಲ್ಲಿ 2018–19 ರಲ್ಲಿ ಶೇ.9.5 ಹಾಗೂ 2019–20 ರಲ್ಲಿ ಶೇ.13.94 ಬೆಳವಣಿಗೆ ದರವನ್ನು ಸಾಧಿಸಿದೆಯಾದರೂ, ರಾಜಸ್ವ ವೃದ್ಧಿಯಲ್ಲಾದ ಪ್ರಾರಂಭಿಕ ಕೊರತೆಯಿಂದಾಗಿ ರಾಜ್ಯವು ಈಗಲೂ ಹೆಚ್ಚಿನ ನಷ್ಟ ಪರಿಹಾರವನ್ನು ಸ್ವೀಕರಿಸುತ್ತಿದೆ. ಇತರೆ ನಮ್ಮ ಮಟ್ಟದ ರಾಜ್ಯಗಳಾದ ಮಹಾರಾಷ್ಟ್ರ (ಶೇ.9.16), ತಮಿಳುನಾಡು (ಶೇ.8.71), ಗುಜರಾತ್ (ಶೇ.8.40) ಹಾಗೂ ಪಶ್ಚಿಮ ಬಂಗಾಳ (ಶೇ.11.35) ಇವುಗಳ ಬೆಳವಣಿಗೆ ದರಕ್ಕೆ ಹೋಲಿಸಿದಲ್ಲಿ ರಾಜ್ಯದ ಎಸ್‌ಜಿಎಸ್‌ಟಿ ಬೆಳವಣಿಗೆ ದರವು ಉತ್ತಮವಾಗಿರುತ್ತದೆ.

6. ಯಾವುದೇ ಬಾಕಿ ಇಲ್ಲದೇ ರಾಜ್ಯವು ಕಳೆದ ಮೂರು ವರ್ಷಗಳಲ್ಲಿ ಸ್ವೀಕರಿಸಿದ ನಷ್ಟ ಪರಿಹಾರದ ವಿವರಗಳು ಕೆಳಗಿನಂತಿವೆ.

(ಕೋಟಿ ರೂ.ಗಳಲ್ಲಿ)

	ಸಂರಕ್ಷಿತ ರಾಜಸ್ವ	ಸಂಗ್ರಹಣೆ	ಕೊರತೆ	ಪಡೆದ ನಷ್ಟ ಪರಿಹಾರ	ಬಾಕಿ
2017–18	35229.69	25978.07	9251.62	9251.62	ಇಲ್ಲ
2018–19	53549.04	35208.57	18340.47	18340.47	ಇಲ್ಲ
2019–20	61045.92	40940.03	20105.89	20105.89	ಇಲ್ಲ

7. ಕರ್ನಾಟಕವು ಈ ನಷ್ಟ ಪರಿಹಾರದ ವ್ಯತ್ಯಾಸವನ್ನು ತನ್ನ ಸ್ವಂತ ಮೂಲಗಳಿಂದ ಅಥವಾ ಎರವಲು ಪಡೆಯುವ ಮೂಲಕ ತುಂಬಿಕೊಡುವಂತೆ ಕೇಂದ್ರ ಸರ್ಕಾರವನ್ನು ಒತ್ತಾಯಿಸಿರುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಮಾನ್ಯ ಕೇಂದ್ರ ವಿತ್ತ ಸಚಿವರಿಗೆ ಬರೆದ 25ನೇ ಜೂನ್ 2020ರ ಪತ್ರದಲ್ಲಿ, ರಾಜ್ಯಗಳಿಗೆ ಈ ವ್ಯತ್ಯಾಸವನ್ನು ಸಾಕಷ್ಟು ಪ್ರಮಾಣದಲ್ಲಿ ತುಂಬಿಕೊಡಬೇಕಾಗಿ ಒತ್ತಾಯಿಸಿರುತ್ತಾರೆ.

8. ಮೇಲೆ ಚರ್ಚಿಸಿದ ಆಯ್ಕೆಗಳಲ್ಲಿ, ಆಯ್ಕೆ–1 ನಮ್ಮ ರಾಜ್ಯಕ್ಕೆ ಫಲಕಾರಿಯಾಗಿರುವುದರಿಂದ, ಕರ್ನಾಟಕ ರಾಜ್ಯವು ಆಯ್ಕೆ–1ನ್ನು ಜಿ.ಎಸ್.ಟಿ ನಷ್ಟ ಪರಿಹಾರ ಸಾಲಕ್ಕೆ ಆಯ್ಕೆ ಮಾಡಿಕೊಂಡಿರುತ್ತದೆ. ಸದರಿ ಆವರಣದ ಅಡಿಯಲ್ಲಿ, ಕರ್ನಾಟಕ ರಾಜ್ಯವು 2021 ನೇ ಆರ್ಥಿಕ ವರ್ಷದಲ್ಲಿ ರೂ.12000 ಕೋಟಿ ಸಾಲವನ್ನು ಪಡೆಯಲು ಅರ್ಹವಾಗಿರುತ್ತದೆ. ಆದರೆ, ಇದಕ್ಕೆ ಮೀರಿ ರಾಜ್ಯವು ಪಡೆಯಲು ಅರ್ಹವಾಗಿರುವ ನಷ್ಟ ಪರಿಹಾರದ ಮೊತ್ತವು ಹಾಗೆಯೇ ಉಳಿಯುತ್ತದೆ. ಸಾಲದ ಅಸಲು ಮತ್ತು ಬಡ್ಡಿಯ ಮೊತ್ತವನ್ನು ಸಂಗ್ರಹಗೊಳ್ಳುವ ಸೆಸ್ ಮೊಬಲಗಿನ ಮುಖಾಂತರ ಸಂದಾಯ ಮಾಡಲಾಗುವುದರಿಂದ ಇದು ಮುಂದೆ ರಾಜ್ಯದ ಮೇಲೆ ಹೊರೆಯಾಗುವುದಿಲ್ಲ ಹಾಗೂ ಹೆಚ್ಚುವರಿಯಾಗಿ ಸಾಲ ಪಡೆಯುವ ಮಿತಿ ಮತ್ತು ಸಾಲವನ್ನು ಮುಂದಿನ ಸಾಲಿಗೆ ಮುಂದೂಡುವಿಕೆಯ ಅವಕಾಶಗಳು ಸಹ ಬದಲಾಗದೆ ಉಳಿಯುತ್ತವೆ.

9. ನಷ್ಟ ಪರಿಹಾರ ಕಾಯ್ದೆ ಪ್ರಕಾರ, ಸೆಸ್ಸ್ ಮೊತ್ತದಲ್ಲಿ ನಷ್ಟ ಪರಿಹಾರವನ್ನು ನೀಡಲಾಗುತ್ತದೆ. 2020–21ರ ಸೆಸ್ಸ್ ಸಂಗ್ರಹಣೆಯಾಗುವ ಮೊತ್ತವೂ ನಷ್ಟ ಪರಿಹಾರ ನೀಡಲು ರಾಜ್ಯಗಳಿಗೆ ಕೊರತೆಯಾಗುತ್ತದೆ. ಆದುದ್ದರಿಂದ ಜಿ.ಎಸ್.ಟಿ ಕೌನ್ಸಿಲ್‌ರವರು 2022ರ ನಂತರವೂ ಸೆಸ್ಸ್ ಸಂಗ್ರಹಣೆಯನ್ನು ಮುಂದುವರೆಸಿದರೆ ನಷ್ಟ ಪರಿಹಾರವನ್ನು ರಾಜ್ಯಗಳಿಗೆ ನೀಡಲು ಅನುಕೂಲವಾಗುವುದು.

10. ಪ್ರಸ್ತುತ, 2020–21ನೇ ಸಾಲಿನ ನಷ್ಟ ಪರಿಹಾರವನ್ನು ರಾಜ್ಯಕ್ಕೆ ನೀಡಲು ಸಾಲದ ಮುಖಾಂತರ ಪಡೆಯಬಹುದು. ಇಲ್ಲಿಯವರೆಗೂ 13–ಸಾಲದ ಕಂತನ್ನು ರೂ.9721 ಕೋಟಿ ಜಿ.ಎಸ್.ಟಿ ನಷ್ಟ ಪರಿಹಾರ ಸಾಲದ ರೂಪದಲ್ಲಿ ರಾಜ್ಯಕ್ಕೆ ನೀಡಲಾಗಿರುತ್ತದೆ. ಉಳಿದ ಮೊತ್ತವನ್ನು ಮುಂದಿನ ತಿಂಗಳುಗಳಲ್ಲಿ ನೀಡಲಾಗುತ್ತದೆ. ಜಿ.ಎಸ್.ಟಿ ಸಾಲದ ಅಸಲು

ಮತ್ತು ಬಡ್ಡಿ 2022ರ ನಂತರ ಸಂಗ್ರಹಣೆಯಾಗುವ ಸೆಸ್‌ನಲ್ಲಿ ಮರುಪಾವತಿ ಮಾಡಲಾಗುವುದು. ಇದರಿಂದ ರಾಜ್ಯಕ್ಕೆ ಯಾವುದೇ ಆರ್ಥಿಕ ಹೊರೆಯಾಗುವುದಿಲ್ಲ.

11. ಜನವರಿ–2021ರ ಅಂತ್ಯಕ್ಕೆ ರೂ.3553 ಕೋಟಿ ಜಿ.ಎಸ್.ಟಿ ನಷ್ಟ ಪರಿಹಾರ ಮತ್ತು ರೂ.9721 ಕೋಟಿ ಸಾಲ ಸ್ವೀಕರಿಸಿದ್ದು, ಒಟ್ಟಾರೆ ರೂ.13274 ಕೋಟಿ ಸ್ವೀಕರಿಸಲಾಗಿದೆ. ನವೆಂಬರ್ 2020ರ ತಿಂಗಳಿನ ಅಂತ್ಯಕ್ಕೆ ಕೇಂದ್ರ ಸರ್ಕಾರದಿಂದ ಬರಬೇಕಾದ ನಷ್ಟ ಪರಿಹಾರದ ಮೊತ್ತ ರೂ. 9783 ಕೋಟಿ ಬಾಕಿ ಇರುತ್ತದೆ.

(ಶ್ರೀಕರ್ ಎಮ್.ಎಸ್)
ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ),ಬೆಂಗಳೂರು.

ವಾಣಿಜ್ಯ ತೆರಿಗೆಗಳ ಆಯುಕ್ತರು
(ಕರ್ನಾಟಕ) ಬೆಂಗಳೂರು

10D

ಕರ್ನಾಟಕ ವಿಧಾನ ಸಭೆ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 523
ಸದಸ್ಯರ ಹೆಸರು : ಶ್ರೀ ಸೋಮನಗೌಡ ಬಿ.ಪಾಟೀಲ್ (ಸಾಸನೂರು) (ದೇವರ ಹಿಪ್ಪರಗಿ)
ಉತ್ತರಿಸುವ ದಿನಾಂಕ : 02.02.2021
ಉತ್ತರಿಸುವ ಸಚಿವರು : ಜಲಸಂಪನ್ಮೂಲ ಸಚಿವರು

ಕ್ರ ಸಂ:	ಪ್ರಶ್ನೆ	ಉತ್ತರ
ಅ)	ಬೂದಿಹಾಳ ಪೀರಾಪುರ ಏತ ನೀರಾವರಿ ಯೋಜನೆಗೆ ಸರ್ಕಾರ ಯಾವಾಗ ಅನುಮೋದನೆ ನೀಡಲಾಗುವುದು; ಇದರ ಕಾಲಮಿತಿ ಎಷ್ಟು;	ಸರ್ಕಾರದ ಆದೇಶ ದಿನಾಂಕ:20.07.2016 ರಲ್ಲಿ ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆಯ ಪರಿಷ್ಕೃತ ಅಂದಾಜು ಮೊತ್ತ ರೂ.840.00 ಕೋಟಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಸದರಿ ಯೋಜನೆಯ ಟರ್ನ್‌ಕೀ ಆಧಾರಿತ ಮುಖ್ಯ ಸ್ಥಾವರದ ಕಾಮಗಾರಿಯನ್ನು ದಿನಾಂಕ:21.09.2017 ರಂದು ಗುತ್ತಿಗೆ ವಹಿಸಿದ್ದು, ಕಾಮಗಾರಿ ಪೂರ್ಣಗೊಳಿಸಲು 24 ತಿಂಗಳು ಕಾಲಾವಧಿ ನಿಗದಿಪಡಿಸಿದ್ದು, ಪ್ರಸ್ತುತ, ಕಾಮಗಾರಿ ಬಹುತೇಕ ಪೂರ್ಣಗೊಳ್ಳುವ ಹಂತದಲ್ಲಿದೆ ಹಾಗೂ ಮಾರ್ಚ್-2021ರ ಅಂತ್ಯಕ್ಕೆ ಪೂರ್ಣಗೊಳಿಸಿ ಡೆಲಿವರಿ ಚೇಂಬರ್‌ಗೆ ನೀರು ಹರಿಸಲು ಯೋಜಿಸಲಾಗಿದೆ.
ಆ)	ಇದಕ್ಕೆ ಪ್ರಾರಂಭದಲ್ಲಿ ಹಂಚಿಕೆಯಾದ ಮತ್ತು ಮರು ಹಂಚಿಕೆಯಾದ ನೀರಿನ ಪ್ರಮಾಣ ಎಷ್ಟು;	ಸದರಿ ಯೋಜನೆಯ ಮೂಲ ಯೋಜನಾ ವರದಿಯನ್ವಯ ತೆರೆದ ಕಾಲುವೆ ಜಾಲಗಳ (open canal system) ನಿರ್ಮಾಣದೊಂದಿಗೆ ನೀರಾವರಿ ಸೌಲಭ್ಯ ಕಲ್ಪಿಸಲು 3.78 ಟಿಎಂಸಿ ನೀರು ಹಂಚಿಕೆಯಾಗಿರುತ್ತದೆ. ಈ ಯೋಜನೆಯಡಿ ಉದ್ದೇಶಿತ ತೆರೆದ ಕಾಲುವೆ ಜಾಲದ ಬದಲಾಗಿ ಪೈಪ್‌ಲೈನ್ ಅಳವಡಿಕೆಯಿಂದ ನೀರಿನ ಸೋರಿಕೆ ಆಗುವುದನ್ನು ತಡೆಗಟ್ಟಬಹುದಾಗಿರುತ್ತದೆ ಹಾಗೂ ನೀರಿನ ಬಳಕೆಯಲ್ಲಿನ ದಕ್ಷತೆ ಹೆಚ್ಚಿಸಲು ಸಹಕಾರಿಯಾಗಲಿದೆ. ಈ ಹಿನ್ನೆಲೆಯಲ್ಲಿ, ಮೂಲ ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆಯಡಿ ತೆರದ ಕಾಲುವೆ ಬದಲು ಪೈಪ್ ಲೈನ್ ವಿತರಣಾ ಕಾಲುವೆ ಜಾಲವನ್ನು ಅಳವಡಿಸಿ ಅನುಷ್ಠಾನಗೊಳಿಸಲು ಯೋಜಿಸಲಾಗಿರುವುದರಿಂದ ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆಗೆ ಪ್ರಸ್ತುತ ಅವಶ್ಯವಿರುವ ನೀರಿನ ಪ್ರಮಾಣವು 2.52 ಟಿಎಂಸಿ ಆಗಿರುತ್ತದೆ.
ಇ)	ಈ ಯೋಜನೆಗೆ ಮೀಸಲಿರಿಸಿದ ಅನುದಾನ ಎಷ್ಟು; (ವಿವರ ನೀಡುವುದು)	ಮೂಲ ಬೂದಿಹಾಳ-ಪೀರಾಪುರ ಯೋಜನೆಗೆ ನೀಡಲಾಗಿರುವ ಆಡಳಿತಾತ್ಮಕ ಅನುಮೋದನೆ ಮೊತ್ತ ರೂ.840.00 ಕೋಟಿ ಆಗಿರುತ್ತದೆ. ಪ್ರಸಕ್ತ 2020-21ನೇ ಸಾಲಿನಲ್ಲಿ ಯೋಜನೆಗೆ ಸೂಕ್ತ ಅನುದಾನ ಒದಗಿಸಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತಿದೆ.
ಈ)	ಹೆಡ್‌ವರ್ಕ್ ಕಾಮಗಾರಿ ಪೂರ್ಣ ಗೊಂಡು ವರ್ಷಗಳಾದರೂ ಡಿಸ್ಟ್ರಿಬ್ಯೂಟರ್ ಕಾಮಗಾರಿಯನ್ನು ಈವರೆಗೆ ಕೈಗೆತ್ತಿಕೊಳ್ಳದಿರುವುದಕ್ಕೆ ಕಾರಣಗಳೇನು;	ಸಮಗ್ರ ಬೂದಿಹಾಳ-ಪೀರಾಪುರ ಏತ ನೀರಾವರಿ ಯೋಜನೆ ಅನುಷ್ಠಾನದಲ್ಲಿ ತೆರೆದ ಕಾಲುವೆ ಜಾಲದ ಬದಲಾಗಿ ಪೈಪ್‌ಲೈನ್ ವಿತರಣಾ ಜಾಲ ಅಳವಡಿಸಲು ಯೋಜಿಸಲಾಗಿರುವುದರಿಂದ ಪರಿಷ್ಕರಿಸಿದ ಅಂದಾಜು ಪತ್ರಿಕೆಗಳಿಗೆ ಈಗಾಗಲೇ ನಿಗಮದ ಅಂದಾಜು ಪರಿಶೀಲನಾ ಸಮಿತಿ ಸಭೆಯಲ್ಲಿ ತಿರುವಳಿ ನೀಡಲಾಗಿದ್ದು, ಟೆಂಡರ್ ಆಹ್ವಾನಿಸುವ ಹಂತದಲ್ಲಿದೆ. ಯೋಜನೆಯನ್ನು ಅನುದಾನದ ಲಭ್ಯತೆಗೆ ಅನುಗುಣವಾಗಿ 2023-24 ರ ಕಾಲಾವಧಿಯಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.
ಉ)	ಸದರಿ ಕಾಮಗಾರಿಯನ್ನು ಯಾವಾಗ ಪೂರ್ಣಗೊಳಿಸಿ ರೈತರ ಹೊಲಗಳಿಗೆ ನೀರನ್ನು ಹರಿಸಲಾಗುವುದು?	

ಸಂಖ್ಯೆ: ಜಸಂಇ 2 ಡಬ್ಲ್ಯೂಬಿಎಂ 2021

(ರಮೇಶ್ ಎಲ. ಜಾರಕಿಹೊಳಿ)
ಜಲ ಸಂಪನ್ಮೂಲ ಸಚಿವರು

ಕರ್ನಾಟಕ ವಿಧಾನ ಸಭೆ

11

01. ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 440
02. ಸದಸ್ಯರ ಹೆಸರು : ಶ್ರೀ ರಾಜೇಗೌಡ ಟಿ.ಡಿ. (ಶೃಂಗೇರಿ)
03. ಉತ್ತರಿಸುವ ದಿನಾಂಕ : 02.02.2021
04. ಉತ್ತರಿಸುವ ಸಚಿವರು : ಗೃಹ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು

ಕ್ರ.ಸಂ	ಪ್ರಶ್ನೆ	ಉತ್ತರ
ಅ)	ಪೊಲೀಸ್ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಎಲ್ಲಾ ವಿಭಾಗದ ಕಾನ್ಸ್‌ಟೇಬಲ್‌ಗಳಿಗೆ ಹಾಗೂ ಅವರ ಕುಟುಂಬದವರಿಗೆ ಯಾವ ರೀತಿ ಆರೋಗ್ಯ ವಿಮೆ ಕಲ್ಪಿಸಲಾಗಿದೆ ; (ಪೂರ್ಣ ವಿವರ ನೀಡುವುದು)	ಇಲಾಖೆಯಲ್ಲಿ ಆರೋಗ್ಯ ಭಾಗ್ಯ ಯೋಜನೆಯು 2002 ರಿಂದ ಜಾರಿಯಲ್ಲಿರುತ್ತದೆ. ಈ ಯೋಜನೆಯಡಿ ಕರ್ನಾಟಕ ಸರ್ಕಾರಿ ನೌಕರರ ಹಾಜರಾತಿ ನಿಯಮ 1963ರ ಪ್ರಕಾರ ಸರ್ಕಾರದಿಂದ ಮಾನ್ಯತೆ ಪಡೆದಿರುವ 179 ಆಸ್ಪತ್ರೆಗಳನ್ನು ಗುರುತಿಸಲಾಗಿರುತ್ತದೆ ಹಾಗೂ ಈ ರೀತಿ ಗುರುತಿಸಲಾದ ಆಸ್ಪತ್ರೆಗಳಲ್ಲಿ ಪೊಲೀಸ್ ಸಿಬ್ಬಂದಿ ಹಾಗೂ ಅವರ ಕುಟುಂಬದವರಿಗೆ ನಗದುರಹಿತ ಚಿಕಿತ್ಸೆಯ ಸೌಲಭ್ಯವನ್ನು ಸಿ.ಜಿ.ಹೆಚ್.ಎಸ್ ನಿಗದಿಪಡಿಸಿರುವ ದರದಲ್ಲಿ ನೀಡಲಾಗುತ್ತಿದ್ದು, ಸಿ.ಜಿ.ಹೆಚ್.ಎಸ್ ನಲ್ಲಿ ನಿಗದಿಯಾಗಿರದ ಪ್ರಕ್ರಿಯೆಗಳಿಗೆ ಆರೋಗ್ಯ ಭಾಗ್ಯ ಯೋಜನೆ ಟ್ರಸ್ಟ್ ವತಿಯಿಂದ ಮಂಜೂರಾತಿ ನೀಡಲಾಗುತ್ತಿರುತ್ತದೆ.
ಆ)	ರಾಜ್ಯದಲ್ಲಿ 2019-20 ಮತ್ತು 2020-21ನೇ ಸಾಲಿನಲ್ಲಿ ಎಲ್ಲಾ ವಿಭಾಗದ ಎಷ್ಟು ಪೊಲೀಸ್ ಕಾನ್ಸ್‌ಟೇಬಲ್‌ಗಳು ಆಕಸ್ಮಿಕವಾಗಿ ಅಥವಾ ಕರ್ತವ್ಯದಲ್ಲಿರುವಾಗ ಮೃತರಾಗಿರುತ್ತಾರೆ;	2019-20 ಮತ್ತು 2020-21ನೇ ಸಾಲಿನಲ್ಲಿ ಕರ್ತವ್ಯದ ಮೇಲಿರುವಾಗ ಆಕಸ್ಮಿಕವಾಗಿ / ಅಪಘಾತದಲ್ಲಿ ಮೃತಪಟ್ಟ ಪಿ.ಸಿ. ಮತ್ತು ಹೆಚ್.ಸಿ. ಗಳ ಒಟ್ಟು ಸಂಖ್ಯೆ: 41
ಇ)	ಮೃತ ನೌಕರರ ಕುಟುಂಬಕ್ಕೆ ಯಾವ ಪರಿಹಾರ ನೀಡಲಾಗಿದೆ? (ವಿಭಾಗವಾರು ಪೂರ್ಣ ವಿವರ ನೀಡುವುದು)	ಮೃತಪಟ್ಟ ಒಟ್ಟು 41 ಪಿ.ಸಿ. ಮತ್ತು ಹೆಚ್.ಸಿ. ಗಳ ಪೈಕಿ ಈಗಾಗಲೇ ಒಟ್ಟು 22 ಮೃತ ಕುಟುಂಬದವರಿಗೆ ವಿಮಾ ಕಂಪನಿಯ ಮೂಲಕ ಪ್ರತಿ ಕುಟುಂಬಕ್ಕೆ ರೂ.20.00 ಲಕ್ಷಗಳಂತೆ ಒಟ್ಟು ರೂ.4 ಕೋಟಿ 40.00 ಲಕ್ಷಗಳನ್ನು ಮೆ: ಯುನೈಟೆಂಡ್ ಇಂಡಿಯಾ ಇನ್ಶೂರೆನ್ಸ್ ಕಂಪನಿ, ಬೆಂಗಳೂರು ರವರ ಮುಖಾಂತರ ನೀಡಲಾಗಿದೆ, ಬಾಕಿ ಉಳಿದ ಒಟ್ಟು 19 ಮೃತ ಸಿಬ್ಬಂದಿಗಳ ಕುಟುಂಬಗಳಿಗೆ ಪರಿಹಾರ ನೀಡುವ ಪ್ರಕ್ರಿಯೆ ವಿಮಾ ಕಂಪನಿಯಲ್ಲಿ ಚಾಲ್ತಿಯಲ್ಲಿರುತ್ತದೆ. ವಿವರಗಳನ್ನು **ಅನುಬಂಧ-ಅ** ನಲ್ಲಿ ನೀಡಲಾಗಿದೆ.

ಒಇ/07/ಪಿಹೆಚ್ಎಸ್/2021

(ಬಸವರಾಜ ಬೊಮ್ಮಾಯಿ)
ಗೃಹ, ಕಾನೂನು ಮತ್ತು ಸಂಸದೀಯ
ವ್ಯವಹಾರಗಳ ಸಚಿವರು

ಅನುಬಂಧ-ಅ

2019-20ನೇ ಸಾಲಿನಿಂದ 2020-21ನೇ ಸಾಲಿನವರೆಗೆ (ದಿನಾಂಕ 01-01-2019 ರಿಂದ 31-12-2020ರ ವರೆಗೆ)

ಕರ್ತವ್ಯದ ಮೇಲಿರುವಾಗ ಆಕಸ್ಮಿಕ/ಅಪಘಾತದಲ್ಲಿ ಮೃತಪಟ್ಟ ಪಿ.ಸಿ ಮತ್ತು ಹೆಚ್.ಸಿ ರವರ ಕುಟುಂಬದವರಿಗೆ ಸರ್ಕಾರ/ಇಲಾಖಾ ವತಿಯಿಂದ ನೀಡಿರುವ ಪರಿಹಾರ ಮೊತ್ತ ಮತ್ತು ಇತರೆ ಆರ್ಥಿಕ ಸೌಲಭ್ಯಗಳ ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.

2019-20 ಮತ್ತು 2020-21

ಕ್ರ ಸಂ.	ಮೃತಪಟ್ಟ ಅಧಿಕಾರಿ/ಸಿಬ್ಬಂದಿಯ ಹೆಸರು ಮತ್ತು ಹುದ್ದೆ	ಕರ್ತವ್ಯ ನಿರ್ವಹಿಸುತ್ತಿದ್ದ ಸ್ಥಳ/ಪೊಲೀಸ್ ಠಾಣೆ	ಮೃತಪಟ್ಟ ದಿನಾಂಕ	ಘಟಕ	ನೀಡಿರುವ ಪರಿಹಾರದ ವಿವರ
1	ಶ್ರೀ ಕೆ.ಕೆ. ಆನಂದ, ಸಿ.ಪಿ.ಸಿ-2555	ಹೊಳಲ್ಕೆರೆ ಪೊಲೀಸ್ ಠಾಣೆ	04-05-2019	ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ	ದಿವಂಗತರ ಕುಟುಂಬದವರಿಗೆ ವಿಮಾ ಕಂಪನಿಯವರು ರೂ.20.00 ಲಕ್ಷ ವಿಮಾ ಮೊತ್ತವನ್ನು ದಿನಾಂಕ 15-05-2020 ರಂದು ಮಂಜೂರು ಮಾಡಿ ಪಾವತಿಸಿರುತ್ತಾರೆ. ಇವರ ಕುಟುಂಬದವರಿಗೆ ಗಳಿಕೆ ರಜೆಯ ಮೊತ್ತ ರೂ.1,52,955/-ಗಳು ಮತ್ತು ಇ.ಜಿ.ಐ.ಎಸ್ ಮೊತ್ತ ರೂ.2,54,128/-ಗಳನ್ನು ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ ರವರು ಮಂಜೂರು ಮಾಡಿ ಪಾವತಿಸಿರುತ್ತಾರೆ. ಎನ್.ಪಿ.ಎಸ್ ಮೊತ್ತ ಪಾವತಿಸಲು ಬಾಕಿ ಇರುತ್ತದೆ.
2	ಶ್ರೀ ಬಿ. ತಿಮ್ಮಪ್ಪ ಸಿ.ಪಿ.ಸಿ-2073	ರಾಂಪುರ ಪೊಲೀಸ್ ಠಾಣೆ,	18-09-2020	ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ	ದಿವಂಗತರ ಕುಟುಂಬದವರಿಗೆ ವಿಮಾ ಕಂಪನಿಯವರು ರೂ.20.00 ಲಕ್ಷ ವಿಮಾ ಮೊತ್ತವನ್ನು ದಿನಾಂಕ 30-12-2020 ರಂದು ಮಂಜೂರು ಮಾಡಿ ಪಾವತಿಸಿರುತ್ತಾರೆ. ಇವರ ಕುಟುಂಬದವರಿಗೆ ಗಳಿಕೆ ರಜೆಯ ಮೊತ್ತ ರೂ.78,432/-ಗಳು ಮತ್ತು ಇ.ಜಿ.ಐ.ಎಸ್ ಮೊತ್ತ ರೂ.2,45,149/-ಗಳನ್ನು ಪೊಲೀಸ್ ಅಧೀಕ್ಷಕರು, ಚಿತ್ರದುರ್ಗ ಜಿಲ್ಲೆ ರವರು ಮಂಜೂರು ಮಾಡಿ ಪಾವತಿಸಿರುತ್ತಾರೆ. ಎನ್.ಪಿ.ಎಸ್ ಮೊತ್ತ ಪಾವತಿಸಲು ಬಾಕಿ ಇರುತ್ತದೆ.
